

# “ಕಟ್ಟುವೆವು ನಾವು ಕಂಕಣವ”



ಬಿಡುಗಡೆ
ನವೆಂಬರ್ 14, 2014

# ಪರಿವಿಡಿ


| ಕ್ರ.ಸಂ. | ವಿವರಗಳು | ಪುಟ ಸಂಖ್ಯೆ |
| --- | --- | --- |
| I | ತಾಲೂಕು ಪಂಚಾಯತ್ ಅಧ್ಯಕ್ಷರ ನುಡಿ | 1 |
| II | ಮಹಿಳಾ ಮತ್ತು ಮಕ್ಕಳ ರಕ್ಷಣೆಯ ಕುರಿತಾದ ವಿಶೇಷ ಗ್ರಾಮ ಸಭೆ – ಒಂದು ಪಕ್ಷಿ ನೋಟ | 3 |
| III | ರಕ್ಷಣೆಯ ಕುರಿತಾಗಿ ಮಹಿಳೆಯರು ಮತ್ತು ಮಕ್ಕಳು ಸೂಚಿಸಿದ ವಿವಿಧ ವ್ಯವಸ್ಥೆಗಳು | 20 |
| IV | ಈ ವಿಶೇಷ ಗ್ರಾಮ ಸಭೆಗಳಲ್ಲಿ ಮಕ್ಕಳು ಮತ್ತು ಮಹಿಳೆಯರು ಎತ್ತಿದ ಪ್ರಮುಖ ಸಮಸ್ಯೆಗಳ ಸ್ಥೂಲ ಚಿತ್ರಣ | 26 |
| V | ಮಕ್ಕಳ ಮಿತ್ರ ಮತ್ತು ಮಹಿಳಾ ಮಿತ್ರ – ಒಂದು ಮಾರ್ಗದರ್ಶಿ | 36 |
| VI | ಮಹಿಳಾ ಮಿತ್ರ ಮತ್ತು ಮಕ್ಕಳ ಮಿತ್ರ ಹಾಡು | 43 |
| VII | ಅಗತ್ಯ ಸಂಪರ್ಕ ಸಂಖ್ಯೆಗಳು | 44 |

# ತಾಲೂಕು ಪಂಚಾಯತ್ ಅಧ್ಯಕ್ಷರ ನುಡಿ

ಮಹಿಳೆಯರು ಮತ್ತು ಮಕ್ಕಳು ಇಂದು ಎದುರಿಸುವ ಪ್ರಶ್ನೆಗಳು ಬರೀ ಕೌಟುಂಬಿಕ, ಸಾಮಾಜಿಕ ಆರ್ಥಿಕವಾಗಿಯಲ್ಲದೇ, ರಾಜಕೀಯ ಪ್ರಶ್ನೆ ಸವಾಲುಗಳು ಹೌದು. ಈ ಸಮಸ್ಯೆಗಳ ಪರಿಹಾರವನ್ನು ನಾವು ನಮ್ಮ ಗ್ರಾಮ, ತಾಲೂಕು ನೆಲೆಯಲ್ಲಿ, ನಮ್ಮಲ್ಲೇ, ನಮ್ಮ ಸಂವಿಧಾನದ ಚೌಕಟ್ಟಿನೊಳಗೆ ಕಂಡುಕೊಳ್ಳುವುದು ಕೂಡಾ ತೀರಾ ಅಗತ್ಯ. ಕೇವಲ ಕಾನೂನು ಕೈಗೆತ್ತಿಕೊಳ್ಳುವ ಮೂಲಕವಾಗಲೀ ಮತ್ತೊಬ್ಬರಿಗೆ ಬೆರಳು ತೋರಿಸುವ ಮೂಲಕ ಅಥವಾ ಹೊಸ ಕಾನೂನು ರಚಿಸುವುದರಿಂದ ಮಾತ್ರ ಇದರ ಪರಿಹಾರ ಸಾಧ್ಯವಿಲ್ಲ.

ಕೇವಲ ಸಮಸ್ಯೆ ಎತ್ತಿ ಹಿಡಿಯುವುದರಿಂದ ಮುಗಿಯಲಿಲ್ಲ; ಇದು ಘಟನೆಗೆ ಪ್ರತಿಕ್ರಿಯೆಯೇ ವಿನಃ ಒಂದು ಪರಿಹಾರವಲ್ಲ. ಸಮಸ್ಯೆಯ ಪರಿಹಾರವಾಗಬೇಕಾದರೆ ಸಮಸ್ಯೆಯ ಮೂಲ, ಸ್ಥಳೀಯ ಪರಿಹಾರದ ಸಾಧ್ಯತೆ, ಅದಕ್ಕೆ ಅಗತ್ಯ ವ್ಯವಸ್ಥೆ, ಮಾಹಿತಿ, ಕೌಶಲ್ಯ ಮತ್ತು ರಾಜಕೀಯ ಇಚ್ಛಾಶಕ್ತಿ ತೀರಾ ಅಗತ್ಯ.

ಇದೊಂದು ಮಹಿಳೆಯರು ಮತ್ತು ಮಕ್ಕಳೊಡನೆ ಹೊಸ ದಾರಿ ಕಂಡುಕೊಳ್ಳುವ ಜಂಟಿ ಪಯಣ. ಇದು ನಿತ್ಯ ನಿರಂತರವಾಗಿರಬೇಕು. ಪ್ರತಿ ಹಳ್ಳಿ, ಪ್ರತಿ ವಿಷಯ, ಪ್ರತಿ ವ್ಯಕ್ತಿಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಗಮನಿಸಬೇಕು, ವಿಮರ್ಶಿಸಬೇಕು.

ಮಹಿಳೆ-ಮಕ್ಕಳು ಇವತ್ತು ತಮ್ಮ ಸಮಾಜದಲ್ಲಿ ಸ್ಥಾನಮಾನ ಪಡೆಯಲು ಹಲವು ದಶಕಗಳ ಹೋರಾಟ ನಡೆದಿದೆ. ಭಾರತದ ಸಾಂಸ್ಕೃತಿಕ, ರಾಜಕೀಯ ಇತಿಹಾಸಗಳಲ್ಲಿ ಇದಕ್ಕೆ ಉದಾಹರಣೆಗಳಿವೆ. ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ತಮ್ಮದೇ ಸ್ಥಾನವನ್ನು ಗಳಿಸಿದ್ದಾರೆ. ನಮ್ಮ ಸಂವಿಧಾನವು ಅವರಿಗೆ ಸಮಾನ ಸ್ಥಾನಮಾನ ನೀಡಿದೆ.

ಮಕ್ಕಳಿಗೆ ಹಕ್ಕಿದೆ; ಅದೇ ಸಮಯದಲ್ಲಿ ನಮಗೆ ಜವಾಬ್ದಾರಿ ಇದೆ. ಅವರಿಗೆ ಸುಭದ್ರ, ಆರೋಗ್ಯಕರ ವಾತಾವರಣ ನಿರ್ಮಿಸುವ, ಅವರಿಗೆ ನಾಳಿನ ನಮ್ಮ ವಯಸ್ಕ ಸಮಾಜದಲ್ಲಿ ತನ್ನ ಸದಸ್ಯತ್ವ ಪಡೆದು ಬದುಕಲು, ಅಗತ್ಯವಿರುವ ಜ್ಞಾನ, ಕೌಶಲ್ಯ, ನಡವಳಿಕೆ ಪಡೆಯಲು ಹಕ್ಕಿದೆ. ಅದು ಪಡೆಯುವಂತೆ ಮಾಡುವ ಜವಾಬ್ದಾರಿ ನಮಗಿದ್ದರೆ, ಅದರಲ್ಲಿ ಭಾಗವಹಿಸುವ ಹಕ್ಕು ಮಕ್ಕಳಿಗಿದೆ. ಆದ್ದರಿಂದಲೇ ನಾವು ಇಂದು **'ಮಕ್ಕಳು ಇಂದೇ ಪ್ರಜೆಗಳು'** ಎನ್ನುವ ಮಕ್ಕಳ ಮಾತನ್ನು ಅಂಗೀಕರಿಸಿದ್ದೇವೆ. ಅದಕ್ಕೆ ಬದ್ಧತೆಯನ್ನು ಘೋಷಿಸಿದ್ದೇವೆ.

ನಾವಿವತ್ತು, ಎಲ್ಲಾ ಗ್ರಾಮ ಸಭೆಗಳಿಂದ ಮಹಿಳೆಯರು ಮತ್ತು ಮಕ್ಕಳ ನೂರಾರು ವಿಷಯ ಅರ್ಥ ಮಾಡಿಕೊಳ್ಳಲು ಸಾಧ್ಯವಾಗದ ನೂರಾರು ಸಮಸ್ಯೆಗಳನ್ನು ಮಹಿಳೆ-ಮಕ್ಕಳ ಗ್ರಾಮ ಸಭೆಗಳಲ್ಲಿ ಸಾವಿರಾರು ಮಹಿಳೆಯರು ಮತ್ತು ಮಕ್ಕಳು ವ್ಯಕ್ತ ಪಡಿಸಿದ್ದಾರೆ.

ಇವತ್ತು ಹಳ್ಳಿ-ಹಳ್ಳಿಗಳಲ್ಲಿ ಕುಟುಂಬ ಪರಿಸ್ಥಿತಿ ಬದಲಾಗುತ್ತಿದೆ, ಹಳ್ಳಿಗಳು ಬದಲಾಗುತ್ತಿದೆ. ಆದರೆ ಮಹಿಳೆಯರು, ಹೆಣ್ಣು ಮಕ್ಕಳ ಬಗ್ಗೆ ನಮ್ಮ ಸಾಂಪ್ರದಾಯಿಕ ದೃಷ್ಟಿಕೋನದಲ್ಲಿ ತುಂಬಾ ಬದಲಾವಣೆ ಏನೂ ಆಗಿಲ್ಲ. ಇವತ್ತು ಹೆಣ್ಣು ಮಕ್ಕಳಿಗೆ, ಮತ್ತು ಮಕ್ಕಳಿಗೆ ವಯೊ ಸಹಜವಾಗಿ ದೈಹಿಕ, ಮಾನಸಿಕ ಬದಲಾವಣೆ, ಅವರು ಎದುರಿಸುವ ತೊಂದರೆ, ಅಡೆ-ತಡೆಗಳು, ಅವರ ಮೇಲಿನ ಮನೆ, ಸಾರ್ವಜನಿಕ ಸ್ಥಳಗಳಲ್ಲಾಗುವ ಶೋಷಣೆ, ಪ್ರೀತಿ, ಒತ್ತಡ, ಆಕರ್ಷಣೆ, ಕಿರುಕುಳ, ಗೇಲಿ, ಅಸಭ್ಯತೆ, ಕೆಟ್ಟಮಾತು, ನಡವಳಿಕೆ ಹೀಗೆ ನೂರಾರು ವಿಷಯ, ಮಾತು, ವರ್ತನೆ, ಅನುಭವ ಹೇಳಿಕೊಳ್ಳಲು, ಅರ್ಥಮಾಡಿಕೊಳ್ಳಲು ಸೂಕ್ತ ವೇದಿಕೆಗಳೇ ಇಲ್ಲ.

ಆ ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಗ್ರಾಮ ಸಭೆ ಒಂದು ಮಹತ್ತರ ಹೆಜ್ಜೆ. ಇದು ಅವರ ವೇದಿಕೆ. ನಾವು "ಕುಂದಾಪುರ ತಾಲೂಕು ಪಂಚಾಯತ್" ಈ ದಿಸೆಯಲ್ಲಿ ಹೊಸ ದಾರಿ ಕಂಡುಕೊಳ್ಳಲು ಹೊರಟಾಗ ನಮಗೆ ಎಲ್ಲಾ ಕಡೆಗಳಿಂದ ಬೆಂಬಲಗಳು ಹರಿದು ಬಂದವು. ಎಲ್ಲಾ 56 ಗ್ರಾಮ ಪಂಚಾಯತ್‌ಗಳ ಪದಾಧಿಕಾರಿಗಳು, ಸದಸ್ಯರು, ತಾಲೂಕು ಪಂಚಾಯತ್ ಎಲ್ಲಾ ಗೌರವಾನ್ವಿತ ಸದಸ್ಯರು, ಪಕ್ಷ–ಪಂಗಡವೆನ್ನದೇ ವಿವಿಧ ಸಂಘಟನೆಗಳು, ವಿವಿಧ ಆಸಕ್ತ ಗೌರವಾನ್ವಿತ ವ್ಯಕ್ತಿಗಳು, ತಾಲೂಕು ಗ್ರಾಮದ ಎಲ್ಲಾ ಅಧಿಕಾರಿ ವರ್ಗ, ಶಿಕ್ಷಕರು, ಅಂಗನವಾಡಿ ಕಾರ್ಯಕರ್ತರು, ವಿವಿಧ ಮಾಧ್ಯಮದವರು ಹೀಗೆ ಎಲ್ಲರೂ ಅದರಲ್ಲೂ ವಿಶೇಷವಾಗಿ ಕುಂದಾಪುರ ತಾಲೂಕಿನ ಸಾವಿರಾರು ಮಹಿಳೆಯರು, ಮಕ್ಕಳು ಈ ಪ್ರಕ್ರಿಯೆಯಲ್ಲಿ ಭಾಗವಹಿಸಿ ಹೊಸ ಇತಿಹಾಸ ಸೃಷ್ಟಿಸಲು ಮುನ್ನಡೆದಿದ್ದಾರೆ. ಇದು ಖಂಡಿತವಾಗಿಯೂ ಹೊಸ ದಾರಿಯನ್ನು ಸೃಷ್ಟಿಸುತ್ತದೆ; ಮಾದರಿಯಾಗುತ್ತದೆ ಎನ್ನುವ ವಿಶ್ವಾಸದಿಂದ ಆ ಮೂಲಕ ಕುಂದಾಪುರ ತಾಲೂಕು ಮಕ್ಕಳ ಸ್ನೇಹಿ, ಮಹಿಳಾ ಸ್ನೇಹಿ ತಾಲೂಕು ಆಗುತ್ತದೆ. ಆ ನೆಲೆಯಲ್ಲಿ ಮಾದರಿಯಾಗುತ್ತದೆ ಎನ್ನುವ ಭರವಸೆ ನನ್ನದು.

ಈ ಇಡೀ ಪ್ರಕ್ರಿಯೆ, ಅಭಿಪ್ರಾಯ, ರಚಿಸಿಕೊಂಡ ರಚನೆ, ಯೋಜಿಸಿದ ಯೋಜನೆ ಏನು ಎನ್ನುವ ಅನುಭವ, ಪ್ರಕ್ರಿಯೆಯ ದಾಖಲಾತಿ ಈ ಪುಸ್ತಕ. ಇದು ಎಲ್ಲರಿಗೂ ಅನುಭವ ನೀಡುವ ದಾಖಲಾತಿ. ಈ ದಾಖಲೆಯನ್ನು ಸಂಗ್ರಹಿಸಿ ಅಚ್ಚುಕಟ್ಟಾಗಿ ರೂಪಿಸುವಲ್ಲಿ ಸಹಕರಿಸಿದ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ – ನಮ್ಮ ಭೂಮಿ ಸಂಸ್ಥೆಯನ್ನು ಅಭಿನಂದಿಸುತ್ತಾ ಈ ಪುಸ್ತಕವನ್ನು ನಮ್ಮ ತಾಲೂಕಿನ ಪ್ರತಿ ಮಹಿಳೆ ಮತ್ತು ಮಕ್ಕಳಿಗೆ ಅಭಿಮಾನಪೂರ್ವಕವಾಗಿ ಅರ್ಪಿಸುತ್ತಾ

ಭಾಸ್ಕರ ಬಿಲ್ಲವ
ಅಧ್ಯಕ್ಷರು ಕುಂದಾಪುರ ತಾಲೂಕು ಪಂಚಾಯತ್
ಕುಂದಾಪುರ



ದಿನಾಂಕ: 14-11-2014

## ಮಹಿಳಾ ಮತ್ತು ಮಕ್ಕಳ ರಕ್ಷಣೆ ಕುರಿತಾದ ವಿಶೇಷ ಗ್ರಾಮ ಸಭೆ – ಒಂದು ಪಕ್ಷಿ ನೋಟ

**ಹಿನ್ನೆಲೆ:**

ರಾಜ್ಯದಾದ್ಯಂತ ಹಲವೆಡೆಗಳಲ್ಲಿ ಮಹಿಳೆಯರ ಮೇಲೆ, ಮಕ್ಕಳ ಮೇಲೆ ಆಗುತ್ತಿರುವ ಶೋಷಣೆ, ದೌರ್ಜನ್ಯ ಒಂದೆಡೆಯಾದರೆ, ತರುಣ-ತರುಣಿಯರ ಹದಿಹರೆಯದ ಸಮಸ್ಯೆಗಳಿಂದುಂಟಾಗುತ್ತಿರುವ ತಲ್ಲಣಗಳು, ಕಸಿವಿಸಿಗಳು, ಅಭಿವೃದ್ಧಿಯ ಹೆಸರಿನಲ್ಲಿ ಕೈಗೊಂಡ ಕಾಮಗಾರಿಗಳಾದಂತಹ ಕೊಳವೆಬಾವಿ, ಮದಗ, ಕಲ್ಲುಕೋರೆ, ಕೃಷಿಹೊಂಡ, ಕೆರೆ, ಕೊಜೆಹೊಂಡ ಇವುಗಳ ಸುತ್ತ ಸೂಕ್ತ ರಕ್ಷಣಾ ವ್ಯವಸ್ಥೆ ಇಲ್ಲದೇ ಉಂಟಾಗುತ್ತಿರುವ ಅನಾಹುತಗಳು, ದುರ್ಘಟನೆಗಳು, ಆಕಸ್ಮಿಕಗಳು ಕುಂದಾಪುರದ ಜನರನ್ನು ಕಂಗೆಡಿಸಿದ್ದವು.



ಎರಡು ವರ್ಷದ ಹಿಂದೆ, ಅಂದರೆ 2012ರಲ್ಲಿ ಕುಂದಾಪುರ ತಾಲೂಕಿನಲ್ಲಿ ಕಲ್ಲುಕೋರೆ, ಮದಗ, ಕೃಷಿಹೊಂಡಗಳಲ್ಲಿ ಮಳೆಗಾಲದಲ್ಲಿ ನೀರು ತುಂಬಿ ಮೃತ್ಯುಕೂಪಗಳಾಗಿ ಪರಿಣಮಿಸಿ ಒಂದೇ ವಾರದಲ್ಲಿ 12 ಮಕ್ಕಳನ್ನು ಬಲಿತೆಗೆದುಕೊಂಡಿದ್ದವು. ಆ ಸಮಯದಲ್ಲಿ ಮಕ್ಕಳ ಹಕ್ಕುಗಳು ಮತ್ತು ಭಾಗವಹಿಸುವಿಕೆ, ಸಮುದಾಯದ ಭಾಗವಹಿಸುವಿಕೆ ಮತ್ತು ರಕ್ಷಣೆ, ವಿಕೇಂದ್ರೀಕರಣದ ಕುರಿತಾಗಿ ಕೆಲಸ ನಿರ್ವಹಿಸುತ್ತಿರುವ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ (ಸಿ.ಡಬ್ಲ್ಯೂ.ಸಿ.) ಸಂಸ್ಥೆಯು (www.concernedforworkingchildren.org) ಗ್ರಾಮ ಪಂಚಾಯತ್ ಮತ್ತು ಮಕ್ಕಳ ಪ್ರತಿನಿಧಿಗಳೊಂದಿಗೆ ಜೊತೆಗೂಡಿ ಜಿಲ್ಲಾಡಳಿತದ ಜೊತೆ ಈ ಕುರಿತಾಗಿ ತಕ್ಷಣ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವಂತೆ ಗಂಭೀರ ಮಾತುಕತೆ ನಡೆಸಿತು. ಜಿಲ್ಲಾಡಳಿತ ಕೂಡ ಈ ವಿಷಯದ ಗಂಭೀರತೆಯನ್ನು ಅರ್ಥಮಾಡಿಕೊಂಡು ತಕ್ಷಣದಲ್ಲಿ ಅಗತ್ಯ ರಕ್ಷಣಾ ಕಾರ್ಯ ಕೈಗೊಳ್ಳುವಂತೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ಆದೇಶ ಹೊರಡಿಸಿತ್ತು. ಅದರಂತೆ ಕುಂದಾಪುರ ತಾಲೂಕಿನ 46 ಗ್ರಾಮ ಪಂಚಾಯತ್‌ಗಳು ತಕ್ಷಣದ ತಾತ್ಕಾಲಿಕ ರಕ್ಷಣಾ ಕಾರ್ಯ ಕೈಗೊಂಡಿದ್ದವು. ಇದರ ಫಲವಾಗಿ 2013ರಲ್ಲಿ ಅಂತಹ ಯಾವುದೇ ಅನಾಹುತಗಳು ಸಂಭವಿಸಿರಲಿಲ್ಲ.

ಆದರೆ ಅನೇಕ ಕಡೆ ಕೈಗೊಂಡ ರಕ್ಷಣಾ ಕ್ರಮಗಳು ತಾತ್ಕಾಲಿಕವಾಗಿದ್ದರಿಂದ ಇಂತಹ ಅನಾಹುತಗಳು ಅಲ್ಲದೇ ಅತ್ಯಾಚಾರ, ಆತ್ಮಹತ್ಯೆ ಮುಂತಾದ ದುರ್ಘಟನೆಗಳು 2014ರಲ್ಲಿ ಪುನಃ ಮರುಕಳಿಸಲಾರಂಭಿಸಿದವು. ಇದಕ್ಕೆ ಸಂಬಂಧಿಸಿದಂತೆ ಅಲ್ಲಲ್ಲಿ ತಕ್ಷಣದ ಪ್ರತಿಕ್ರಿಯೆಯಾಗಿ ಪ್ರತಿಭಟನೆಗಳು, ಮೆರವಣಿಗೆಗಳು, ಬಂದ್‌ಗಳು ನಡೆದವೇ ಹೊರತೂ ದೀರ್ಘಕಾಲಿಕ ಶಾಶ್ವತ ಪರಿಹಾರಕ್ಕಾಗಿ ಯಾವುದೇ ಕ್ರಮಗಳನ್ನೂ ಕೈಗೊಳ್ಳುತ್ತಿಲ್ಲವೆಂಬ ಅಭಿಪ್ರಾಯ ಮಕ್ಕಳಿಂದ ಹಾಗೂ ಸಮುದಾಯದವರಿಂದ ವಿಶೇಷವಾಗಿ ಮಹಿಳೆಯರಿಂದ ಕೇಳಿಬರಲಾರಂಭಿಸಿತು. ಇವುಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವ ಮಾರ್ಗಗಳಿಗಾಗಿ ಜನರು ಹುಡುಕಾಡುತ್ತಿದ್ದರು. ತಮ್ಮ ಇಂತಹ ಸಮಸ್ಯೆಗಳನ್ನು

ಹಂಚಿಕೊಳ್ಳಲು ಸೂಕ್ತ ವೇದಿಕೆಗಾಗಿ ಎದುರು ನೋಡುತ್ತಿದ್ದರು. ಇದೇ ಸಮಯದಲ್ಲಿ ಜುಲೈ 2014ರಲ್ಲಿ ರಾಜ್ಯ ಸರ್ಕಾರವು ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳಾ ಗ್ರಾಮ ಸಭೆ ನಡೆಸಬೇಕೆಂದು ಆದೇಶ ಹೊರಡಿಸಿತು.

ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸಿ.ಡಬ್ಲ್ಯೂ.ಸಿ. ಸಂಸ್ಥೆಯು ಕುಂದಾಪುರ ತಾಲೂಕು ಪಂಚಾಯತ್ ಅಧ್ಯಕ್ಷರು ಮತ್ತು ಆಸಕ್ತ ಸದಸ್ಯರೊಂದಿಗೆ ಮಾತುಕತೆ ನಡೆಸಿತು. ಜನರ, ಅದರಲ್ಲೂ ಮಕ್ಕಳ ಮತ್ತು ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸಲೇಬೇಕು, ಅಲ್ಲದೇ ಅವರಿಗೆ ರಕ್ಷಣೆ ನೀಡುವುದರೊಂದಿಗೆ, ಅವರ ಹಕ್ಕುಗಳನ್ನು ರಕ್ಷಿಸುವುದು ಹಾಗೂ ಅವುಗಳಿಗೆ ಯಾವುದೇ ಚ್ಯುತಿ ಬರದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಸೂಕ್ತ ಕಾರಣವನ್ನಾಧರಿಸಿ ಈ ಗ್ರಾಮ ಸಭೆ ನಡೆಸಿದರೆ ಅದು ಹೆಚ್ಚು ಅರ್ಥಪೂರ್ಣವಾಗುತ್ತದೆ; ಅಲ್ಲದೇ ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿದರೆ ಮಹಿಳಾ ಮತ್ತು ಮಕ್ಕಳ ರಕ್ಷಣೆ ಅತ್ಯಂತ ಹೆಚ್ಚು ಸೂಕ್ತ ವಿಷಯ ಎಂದು ಚರ್ಚಿಸಲಾಯಿತು. ವಿವಿಧೆಡೆ ನಡೆಯುತ್ತಿರುವ ಅತ್ಯಾಚಾರ ಪ್ರಕರಣಗಳು, ಆತ್ಮಹತ್ಯೆ, ಮಳೆಗಾಲದಲ್ಲಿ ತುಂಬಿ ಹರಿಯುವ ಕೆರೆ, ಮದಗ, ಕಲ್ಲುಕೋರೆ, ಕೃಷಿಹೊಂಡ ಮುಂತಾದವುಗಳಿಂದ ಉಂಟಾಗುವ ಅವಘಡಗಳು, ತೆರೆದ ಕೊಳವೆ ಬಾವಿಯಿಂದುಂಟಾಗಬಹುದಾದ ಅನಾಹುತಗಳು, ಮೊಬೈಲ್, ಅಂತರ್ಜಾಲ ತಂತ್ರಜ್ಞಾನದ ದುರ್ಬಳಕೆಯಿಂದುಂಟಾಗುವ ಅನಾಹುತಗಳು– ಹೀಗೆ ಎಲ್ಲೆಡೆ ನಡೆಯುತ್ತಿರುವ ಘಟನೆಗಳಿಂದಾಗಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆ ಸಂಕಷ್ಟದ ಪರಿಸ್ಥಿತಿಯಲ್ಲಿದೆ. ಈ ಕುರಿತಾಗಿ ಸೂಕ್ತ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಚರ್ಚೆ ನಡೆಸಲಾಯಿತು.

**ಹೊಸ ಪಥವ ಸಾಧಿಸಿದ ತಾಲೂಕು ಪಂಚಾಯತ್**

ಕುಂದಾಪುರ ತಾಲೂಕು ಪಂಚಾಯತ್ ಅಧ್ಯಕ್ಷರಾದ ಶ್ರೀ ಭಾಸ್ಕರ ಬಿಲ್ಲವರ ಅಧ್ಯಕ್ಷತೆಯ ಇಡೀ ತಾಲೂಕು ಪಂಚಾಯತ್ ತಂಡವು ಈ ರೀತಿಯ ಗ್ರಾಮ ಸಭೆಯನ್ನು ನಡೆಸುವಲ್ಲಿ ವಿಶೇಷ ಆಸಕ್ತಿ ತೋರಿತು. ಅಲ್ಲದೇ ಇಡೀ ಕುಂದಾಪುರ ತಾಲೂಕಿನ 56 ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳಾ ಮತ್ತು ಮಕ್ಕಳ ರಕ್ಷಣೆಯ ಕುರಿತಾದ ವಿಶೇಷ ಗ್ರಾಮ ಸಭೆಯನ್ನು ನಡೆಸುವಲ್ಲಿ ಅತ್ಯಂತ ಹೆಚ್ಚಿನ ಆಸ್ಥೆ ವಹಿಸಿ, ಎಲ್ಲಾ ಪಂಚಾಯತ್‌ಗಳಿಗೂ ತಾಲೂಕು ಪಂಚಾಯತ್‌ನಿಂದ ಮಾಹಿತಿ ನೀಡಲಾಯಿತು. ಅಲ್ಲದೇ ಈ ಗ್ರಾಮ ಸಭೆಯು ಕೇವಲ ಒಂದು ಕಾರ್ಯಕ್ರಮವಾಗಿ ನಿಂತು ಹೋಗದೇ, ಇದು ನಿರಂತರತೆಯನ್ನು ಕಾಪಾಡಿಕೊಂಡು, ಮಕ್ಕಳ ಮತ್ತು ಮಹಿಳೆಯರ ರಕ್ಷಣೆಗೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಸ್ನೇಹಿ ಗ್ರಾಮ ಪಂಚಾಯತ್‌ಗಳನ್ನು ಸ್ಥಾಪಿಸುವಲ್ಲಿ ತನ್ನ ಬದ್ಧತೆಯನ್ನು ತೋರಿತು. ಮತ್ತು ಇಡೀ ರಾಜ್ಯದಲ್ಲಿ ಕುಂದಾಪುರ ತಾಲೂಕಿನಲ್ಲಿ ಈ ಬಗ್ಗೆ ಒಂದು ಮಾದರಿ ಸೃಷ್ಟಿಸುವಲ್ಲಿ ತಾಲೂಕು ಪಂಚಾಯತ್ ಪಣತೊಟ್ಟಿತು.

> ***ಈ ಗ್ರಾಮ ಸಭೆಯು ಕೇವಲ ಒಂದು ಕಾರ್ಯಕ್ರಮವಾಗಿ ನಡೆದು ಅಲ್ಲಿಯೇ ನಿಂತು ಹೋಗಬಾರದು; ಇದು ನಿರಂತರತೆಯನ್ನು ಕಾಪಾಡಿಕೊಳ್ಳಬೇಕು; ಅದಕ್ಕಾಗಿ ನಾವೆಲ್ಲರೂ ಈ ಗ್ರಾಮ ಸಭೆಯ ಆಶಯದ ಈಡೇರಿಕೆಗೆ ಪಣ ತೊಡೋಣ, ನಮ್ಮನ್ನು ಆಯ್ಕೆ ಮಾಡಿದ ಜನತೆಗೆ ಬದ್ಧರಾಗಿರೋಣ***
>
> – *ಶ್ರೀ ಭಾಸ್ಕರ ಬಿಲ್ಲವ, ಅಧ್ಯಕ್ಷರು, ತಾಲೂಕು ಪಂಚಾಯತ್ ಕುಂದಾಪುರ*

ಮಕ್ಕಳೊಂದಿಗೆ ಮತ್ತು ಸಮುದಾಯದೊಂದಿಗೆ ಕೆಲಸ ಮಾಡಿ ಅನುಭವ ಹೊಂದಿರುವ ಹಾಗೂ ಮಕ್ಕಳ ಮತ್ತು ಮಹಿಳೆಯರ ಹಕ್ಕುಗಳ ಬಗ್ಗೆ ಹೋರಾಡುತ್ತಿರುವ ಸಿ.ಡಬ್ಲ್ಯೂ.ಸಿ. ಸಂಸ್ಥೆಯು ಇಡೀ ಗ್ರಾಮ ಸಭೆಯ ತಯಾರಿ ಪ್ರಕ್ರಿಯೆಯ ಸೌಕರ್ಯಕಾರರಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿತು.

**ನಾವು ನೀವು ಎಲ್ಲರೂ ಇವರೆಲ್ಲಾ ನಮ್ಮವರು**

ಕುಂದಾಪುರ ತಾಲೂಕು ಪಂಚಾಯತ್ ಅಧ್ಯಕ್ಷರು, ಕೆಲವು ಸದಸ್ಯರು, ಸಿ.ಡಬ್ಲ್ಯೂ.ಸಿ. ಸಂಸ್ಥೆ ಮತ್ತು ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಕುಂದಾಪುರ ಘಟಕದ ಸದಸ್ಯರು ಸೇರಿ ಇಡೀ ಈ ವಿಶೇಷ ಗ್ರಾಮ ಸಭೆಯ ಹಿನ್ನೆಲೆಯಲ್ಲಿ ಏನೇನು ತಯಾರಿಗಳಾಗಬೇಕು, ಯಾರ್‍ಯಾರ ಜೊತೆ ಮಾತುಕತೆ ನಡೆಸಬೇಕು, ಯಾರೊಂದಿಗೆ ಈ ಕುರಿತಾಗಿ ಮಾತುಕತೆ ನಡೆಸಬೇಕು ಎಂದು ಚರ್ಚೆ ನಡೆಸಲಾಯಿತು. ಅದರಂತೆ ಮೊಟ್ಟ ಮೊದಲು ತಾಲೂಕು ಪಂಚಾಯತ್‌ನ ಸಾಮಾನ್ಯ ಸಭೆ ನಡೆಸಿ ಕುಂದಾಪುರ ತಾಲೂಕಿನ 56 ಗ್ರಾಮ ಪಂಚಾಯತ್‌ಗಳಲ್ಲಿ ಮಕ್ಕಳ ಮತ್ತು ಮಹಿಳೆಯರ ರಕ್ಷಣೆಯ ಕುರಿತಾದ ವಿಷಯವನ್ನಾಧರಿಸಿ ವಿಶೇಷ ಗ್ರಾಮ ಸಭೆ ನಡೆಸಬೇಕೆಂದು ತೀರ್ಮಾನಿಸಿ ಎಲ್ಲಾ 56 ಪಂಚಾಯತ್‌ಗಳಿಗೂ ಈ ಕುರಿತಾಗಿ ಮಾಹಿತಿ ನೀಡಲಾಯಿತು.

ನಂತರ, ತಾಲೂಕು ಪಂಚಾಯತ್ ಅಧ್ಯಕ್ಷರ ನೇತೃತ್ವದಲ್ಲಿ ತಾಲೂಕಿನ 56 ಗ್ರಾಮ ಪಂಚಾಯತ್‌ಗಳ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಈ ಕುರಿತಾಗಿ ಚರ್ಚೆ ನಡೆಸಿ, ಈ ಗ್ರಾಮ ಸಭೆಯ ಅಗತ್ಯತೆ, ಇದಕ್ಕೆ ಬೇಕಾದ ತಯಾರಿಗಳು, ಇದನ್ನು ಮುಂದುವರಿಸಿಕೊಂಡು ಹೋಗಬೇಕಾದ ವಿಷಯಗಳ ಕುರಿತು ಮಾಹಿತಿ ಹಂಚಿಕೊಳ್ಳಲಾಯಿತು. ಅಲ್ಲದೇ ಗ್ರಾಮ ಪಂಚಾಯತ್‌ಗಳ ನೋಡಲ್ ಅಧಿಕಾರಿಗಳ ಸಭೆ ಕರೆದು ಈ ಕುರಿತು ಮಾತುಕತೆ ನಡೆಸಲಾಯಿತು. ಈ ಸಭೆಯಲ್ಲಿ ನೋಡಲ್ ಅಧಿಕಾರಿಗಳು ಸಾಮಾನ್ಯವಾಗಿ ನಡೆಯುವ ಗ್ರಾಮ ಸಭೆಯ ಚಿತ್ರಣದ ನಕಾರಾತ್ಮಕ ಅಂಶಗಳನ್ನು ಎತ್ತಿ ಹೇಳಿದರು. ಅಲ್ಲದೇ ಈಗಾಗಲೇ ಒಂದು ಸುತ್ತಿನ ಸಾಮಾನ್ಯ ಗ್ರಾಮಸಭೆಗಳು ನಡೆದಿರುವುದರಿಂದ ಈ ವಿಶೇಷ ಗ್ರಾಮ ಸಭೆಯಲ್ಲಿ ಜನರ ಭಾಗವಹಿಸುವಿಕೆಯ ಕುರಿತಾಗಿಯೂ ಅನುಮಾನ ವ್ಯಕ್ತ ಪಡಿಸಿದರು. ಜನರಿಗೆ ಅಗತ್ಯವಿರುವ ವಿಷಯಗಳ ಕುರಿತಾಗಿ ನೈಜ ಕಾಳಜಿಯುಕ್ತ ಚರ್ಚೆ ನಡೆಸಿದರೆ ಜನರು ಭಾಗವಹಿಸುತ್ತಾರೆ ಎಂಬ ಆಶಯವನ್ನು ಸಭೆ ಸಂಘಟಿಸಿದವರು ವ್ಯಕ್ತಪಡಿಸಿದರು. ನಂತರ ತಾಲೂಕು ಪಂಚಾಯತ್ ಇಡೀ ತಾಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿತು. ಮತ್ತು ಪ್ರಸ್ತುತ ತಾಲೂಕಿನಲ್ಲಿ ಸಂಭವಿಸಿರುವ ಘಟನೆಗಳ ಹಿನ್ನೆಲೆಯಲ್ಲಿ ಇಡೀ ತಾಲೂಕನ್ನು ಮಕ್ಕಳ ಮತ್ತು ಮಹಿಳೆಯರ ಸ್ನೇಹಿ ಪಂಚಾಯತ್ ಆಗಿ ರೂಪಿಸುವ ಅಗತ್ಯತೆ ಇದೆ. ಅದರ ಮೊದಲೆಯ ಹೆಜ್ಜೆಯಾಗಿ ಮಹಿಳೆ ಮಕ್ಕಳ ರಕ್ಷಣೆ ಕುರಿತ ವಿಶೇಷ ಗ್ರಾಮ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಭೆಗೆ ವಿವರಿಸಲಾಯಿತು.




ಈ ಎಲ್ಲಾ ಸಭೆಗಳ ಮೂಲಕ ಬಂದಂತಹ ಅಭಿಪ್ರಾಯ, ಅನಿಸಿಕೆ ಮತ್ತು ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ಸಿ.ಡಬ್ಲ್ಯೂ.ಸಿ. ಸಂಸ್ಥೆಯ ಜೊತೆಗೂಡಿ ತಾಲೂಕು ಪಂಚಾಯತ್ ಗ್ರಾಮ ಸಭೆಯ ಪೂರ್ವದಲ್ಲಿ ಆಗಬೇಕಾದಂತಹ ತಯಾರಿಗಳ, ಕಾರ್ಯಗಳ ರೂಪು-ರೇಷೆಗಳನ್ನು ತಯಾರಿಸಲಾಯಿತು. ತಮ್ಮ ತಮ್ಮ ಪಂಚಾಯತ್‌ಗಳಲ್ಲಿ ಮಕ್ಕಳ

ಮತ್ತು ಮಹಿಳೆಯರ ರಕ್ಷಣೆಯ ಕುರಿತಾಗಿ ಇರುವಂತಹ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು ಈ ಇಡೀ ಪ್ರಕ್ರಿಯೆಯ ಒಂದು ಉದ್ದೇಶವಾಗಿತ್ತು.

ಅದರಂತೆ ಈಗಾಗಲೇ ಗ್ರಾಮ ಪಂಚಾಯತ್ ಮಟ್ಟದಲ್ಲಿ ಅಸ್ಥಿತ್ವದಲ್ಲಿರುವ ಸ್ತ್ರೀಶಕ್ತಿ ಗುಂಪುಗಳು, ನವೋದಯ ಸ್ವಸಹಾಯ ಗುಂಪುಗಳು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಸದಸ್ಯರೊಂದಿಗೆ ಈ ಕುರಿತಾಗಿ ಮಾತುಕತೆ ನಡೆಸಿ ಅವರ ಸಕ್ರೀಯ ಪಾಲ್ಗೊಳ್ಳುವಿಕೆ ಈ ಗ್ರಾಮ ಸಭೆಯನ್ನು ಹೇಗೆ ಅರ್ಥಪೂರ್ಣಗೊಳಿಸುತ್ತದೆ; ಅಲ್ಲದೇ ಅವರ ಗ್ರಾಮದಲ್ಲಿರುವ ಅವರ ಮತ್ತು ಅವರ ಮಕ್ಕಳ ಸಮಸ್ಯೆಗಳನ್ನು ಗುರುತಿಸುವಲ್ಲಿ ಅವರ ಪಾತ್ರ ಎಷ್ಟು ಪ್ರಮುಖವಾದುದು ಎಂಬುದನ್ನು ಅವರೊಂದಿಗೆ ಚರ್ಚಿಸಲಾಯಿತು. ಹಾಗೂ ಮಕ್ಕಳೊಂದಿಗೆ, ಮಕ್ಕಳ ಸಂಘಟನೆಗಳೊಂದಿಗೆ ಈ ಕುರಿತಾಗಿ ಮಾತುಕತೆ ನಡೆಸಿ ರಕ್ಷಣೆಯ ಕುರಿತಾಗಿ ಸಮಸ್ಯೆಗಳನ್ನು ಗುರುತಿಸುವ ಹಾಗೂ ಅವುಗಳನ್ನು ಗ್ರಾಮ ಸಭೆಯ ಮುಂದೆ ಎತ್ತಿ ಹೇಳುವ ಅಗತ್ಯತೆಯ ಕುರಿತಾಗಿ ಚರ್ಚಿಸಲಾಯಿತು.



ಅಲ್ಲದೇ ಮೊಬೈಲ್-ತಂತ್ರಜ್ಞಾನ-ಅಂತರ್ಜಾಲ-ಮಾಧ್ಯಮಗಳ ದುರ್ಬಳಕೆ, ಹದಿಹರೆಯದ ಸಮಸ್ಯೆಗಳು ಮುಂತಾದವುಗಳು ಮಕ್ಕಳ ಮೇಲೆ ಬೀರಬಹುದಾದ ದುಷ್ಪರಿಣಾಮಗಳು, ಆಕಸ್ಮಿಕ ಅವಘಡಗಳು-ದುರ್ಘಟನೆಗಳು, ಇವುಗಳಿಂದ ಮಕ್ಕಳಿಗೆ ಉಂಟಾಗಬಹುದಾದ ಸಮಸ್ಯೆಗಳನ್ನು ಗುರುತಿಸುವಿಕೆಯಲ್ಲಿ ಮಕ್ಕಳ ಪಾತ್ರ ಮತ್ತು ಅವರ ಭಾಗವಹಿಸುವಿಕೆಯ ಕುರಿತಾಗಿ ಅವರ ಪೋಷಕರೊಂದಿಗೆ, ಶಾಲಾ ಮುಖ್ಯಸ್ಥರೊಂದಿಗೆ ಮಾತುಕತೆ ನಡೆಸಿ, ಮಕ್ಕಳೇ ಅವರ ಸಮಸ್ಯೆಗಳನ್ನು ಗುರುತು ಹಾಕುವುದರ ಅಗತ್ಯತೆ ಮತ್ತು ಪ್ರಯೋಜನಗಳನ್ನು ಅವರಿಗೆ ಮನದಟ್ಟು ಮಾಡಲಾಯಿತು. ಅಲ್ಲದೇ ಮೊಬೈಲ್-ಅಂತರ್ಜಾಲ-ತಂತ್ರಜ್ಞಾನಗಳ ಒಳಿತು-ಕೆಡುಕುಗಳು, ಹದಿಹರೆಯದದವಯಸ್ಸಿನಲ್ಲಾಗುವ ಬದಲಾವಣೆಗಳ ಕುರಿತಾಗಿಯೂ ಮಕ್ಕಳಿಗೆ ಅರಿವು ಮೂಡಿಸಬೇಕಾದ ಅಗತ್ಯತೆಯನ್ನು ಅವರೊಂದಿಗೆ ಚರ್ಚಿಸಲಾಯಿತು.

**ಈ ವಿಶೇಷ ಗ್ರಾಮಸಭೆಯ ಪ್ರಮುಖ ಉದ್ದೇಶಗಳೆಂದರೆ:**

- ಮಹಿಳೆಯರು ಮತ್ತು ಮಕ್ಕಳ ಸ್ನೇಹಿ ಗ್ರಾಮ, ಸಮುದಾಯ, ಕುಟುಂಬ ಸ್ಥಾಪನೆ
- ಮಹಿಳೆಯರು ಮತ್ತು ಮಕ್ಕಳಿಗೆ ಅವರ ಕುರಿತಾದ ತೀರ್ಮಾನದಲ್ಲಿ ಭಾಗವಹಿಸಲು ರಾಜಕೀಯ ವೇದಿಕೆ
- ಗ್ರಾಮ ಹಾಗೂ ಪಂಚಾಯತ್‌ನಲ್ಲಿ ಮಹಿಳೆ ಮತ್ತು ಮಕ್ಕಳ ಸಂಘಟಿತ ಭಾಗವಹಿಸುವಿಕೆಗೆ ಒತ್ತು
- ಆ ಮೂಲಕ ಬದಿಗೊತ್ತಲ್ಪಟ್ಟ ವರ್ಗದ ಭಾಗವಹಿಸುವಿಕೆಗೆ ಪ್ರೋತ್ಸಾಹ, ಅವಕಾಶ
- ಮಕ್ಕಳು ಮತ್ತು ಮಹಿಳೆಯರಿಗೆ ಎಲ್ಲಾ ಸ್ಥಳಗಳಲ್ಲಿ ಸುರಕ್ಷಿತವಾದ ರಕ್ಷಣಾ ವ್ಯವಸ್ಥೆ ರೂಪಿಸುವುದು.
- ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅವರಿಂದಲೇ ತಿಳಿದುಕೊಳ್ಳುವುದು

- ಮಹಿಳೆಯರು ಮತ್ತು ಮಕ್ಕಳು ಸಂಘಟಿತರಾಗಿ ತಮ್ಮ ಹಕ್ಕುಗಳನ್ನು ಅರಿತುಕೊಂಡು ಅವುಗಳನ್ನು ಚಲಾಯಿಸುವಲ್ಲಿ ಜಾಗೃತಿ ಮೂಡಿಸುವುದು.
- ಮಹಿಳೆಯರಿಗೆ ಮತ್ತು ಮಕ್ಕಳಿಗೆ ಅವರ ರಕ್ಷಣೆಯ ಕುರಿತಾದ ಕಾನೂನು ವಿಷಯಗಳ ಬಗ್ಗೆ ಅರಿವು ಮೂಡಿಸುವುದು
- ಕೌಟುಂಬಿಕ ದೌರ್ಜನ್ಯ ತಡೆಗಟ್ಟುವಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಹಕಾರ ನೀಡುವುದು
- ಮಹಿಳೆಯರ ಮತ್ತು ಮಕ್ಕಳ ಸಶಕ್ತತೆ



ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕುಂದಾಪುರ ತಾಲೂಕಿನ ಎಲ್ಲಾ 56 ಗ್ರಾಮ ಪಂಚಾಯತ್‌ಗಳಲ್ಲೂ ಪ್ರದೇಶವಾರು ಮಕ್ಕಳ ಮತ್ತು ಮಹಿಳೆಯರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿ, ಆಯಾ ಪ್ರದೇಶದಲ್ಲಿರುವ ರಕ್ಷಣೆಯ ಕುರಿತಾದ ಸಮಸ್ಯೆಗಳನ್ನು ಪಟ್ಟಿ ಮಾಡಲು ಅಲ್ಲಿಯ ಮಹಿಳೆಯರ ಗುಂಪು ಮಕ್ಕಳ ಸಂಘಗಳಿಗೆ ನೆರವಾಗಲಾಯಿತು. ಅಲ್ಲದೇ ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಯಾರ್‍ಯಾರು ಜವಾಬ್ದಾರರು, ಈ ಸಮಸ್ಯೆಗಳ ಪರಿಹಾರಕ್ಕೆ ಸಲಹೆಗಳೇನು ಎಂದೂ ಸಹ ಚರ್ಚೆ ನಡೆಸಿ ಸಮಸ್ಯೆಗಳ ಪಟ್ಟಿಯೊಂದಿಗೆ ಸಮಸ್ಯೆ ಪರಿಹರಿಸುವ ಕಾರ್ಯದಲ್ಲಿ ಯಾರು ಜವಾಬ್ದಾರರು, ಸೂಚಿಸಿದ ಪರಿಹಾರಗಳೇನು ಎಂದೂ ಸಹ ಸೇರಿಸಲಾಯಿತು. ಹಾಗೂ ಸಾಮಾನ್ಯವಾಗಿ ಸಾಮಾನ್ಯ ಗ್ರಾಮ ಸಭೆಯಲ್ಲಿ ಎತ್ತುವಂತಹ ಮೂಲಭೂತ ಸೌಕರ್ಯದ ಕುರಿತಾದ ವಿಷಯಗಳನ್ನು, ಸಮಸ್ಯೆಗಳನ್ನು ಬದಿಗಿಟ್ಟು ಕೇವಲ ರಕ್ಷಣೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಮಾತ್ರ ಈ ಗ್ರಾಮ ಸಭೆಯಲ್ಲಿ ಎತ್ತುವುದರಿಂದ ಹಾಗೂ ತಮ್ಮ ಗ್ರಾಮದ ಮಕ್ಕಳ ಮತ್ತು ಮಹಿಳೆಯರ ರಕ್ಷಣೆ ಪ್ರತಿಯೊಂದು ಸರ್ಕಾರದ ಆದ್ಯ ಕರ್ತವ್ಯ ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಲು ಮತ್ತು ಈ ಸಮಸ್ಯೆಗಳಿಗೆ ಪ್ರಥಮ ಆದ್ಯತೆ ನೀಡುವುದನ್ನು ನಿರಂತರ ನೆನಪಿಸುವ ಕುರುಹಾಗಿ ಪ್ರತಿ ಗ್ರಾಮ ಸಭೆಯಲ್ಲೂ ಗ್ರಾಮ ಪಂಚಾಯತ್ ಎದುರು ಎಲ್ಲರಿಗೂ ಕಣ್ಣಿಗೆ ಕಾಣುವಂತಹ ಸ್ಥಳದಲ್ಲಿ ಮರಕ್ಕೋ, ಕಂಬಕ್ಕೋ ಎತ್ತಿದಂತಹ ಸಮಸ್ಯೆಗಳ ಕುರುಹಾಗಿ ಎಷ್ಟು ಸಮಸ್ಯೆಗಳಿವೆಯೋ ಅಷ್ಟು ಕೆಂಪುಪಟ್ಟಿಯನ್ನು ಕಟ್ಟುವುದು ಎಂದು ಚರ್ಚಿಸಲಾಯಿತು. ಸಮಸ್ಯೆಗಳು ಪರಿಹಾರವಾದಂತೆ ಕೆಂಪುಪಟ್ಟಿಯ ಬದಲಾಗಿ ಬಿಳಿಪಟ್ಟಿಗಳನ್ನು ಕಟ್ಟಿ, ಪಾರದರ್ಶಕ ಸಾಮಾಜಿಕ ಮೇಲ್ವಿಚಾರಣೆಗೆ ಒತ್ತು ನೀಡಬೇಕು ಎಂಬುದನ್ನೂ ಮಹಿಳೆಯರು ಮತ್ತು ಮಕ್ಕಳೊಂದಿಗೆ ಸಹ ಚರ್ಚಿಸಲಾಯಿತು. ಈ ರೀತಿ ಕೆಂಪು ಪಟ್ಟಿಯನ್ನು ಕಟ್ಟಿ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು, ಅವುಗಳ ಪರಿಹಾರಕ್ಕೆ ಗ್ರಾಮ ಪಂಚಾಯತ್ ಅನ್ನು ಉತ್ತರದಾಯಿಯನ್ನಾಗಿ ಮಾಡಿದ ಮೊದಲ ಉದಾಹರಣೆ ಮಕ್ಕಳ ಗ್ರಾಮ ಸಭೆಯದ್ದು.

### ಮಹಿಳೆಯರು, ಮಕ್ಕಳಿಗಾಗಿ ಗ್ರಾಮ ಸರ್ಕಾರ

ಇವೆಲ್ಲವುದರ ಪರಿಣಾಮವಾಗಿ ಅಗಸ್ಟ್ 18, 2014ರಿಂದ ಪ್ರಾರಂಭವಾಗಿ ಸಪ್ಟೆಂಬರ್ 21, 2014ರವರೆಗೆ ಮಹಿಳಾ ಮತ್ತು ಮಕ್ಕಳ ವಿಶೇಷ ಗ್ರಾಮ ಸಭೆ ಕುಂದಾಪುರ ತಾಲೂಕಿನ ಎಲ್ಲಾ 56 ಗ್ರಾಮ ಪಂಚಾಯತ್‌ಗಳಲ್ಲಿ ಸಮರೋಪಾದಿಯಲ್ಲಿ ನಡೆದು ಅಭೂತಪೂರ್ವ ಯಶಸ್ಸನ್ನು ಕಂಡಿತು.

ಈ ಯಶಸ್ವೀ ಗ್ರಾಮ ಸಭೆಗೆ ಪ್ರಮುಖ ರೂವಾರಿ ಕುಂದಾಪುರ ತಾಲೂಕು ಪಂಚಾಯತ್. ಸಂಪನ್ಮೂಲ ವ್ಯಕ್ತಿಗಳಾಗಿ, ಮಾರ್ಗದರ್ಶಿಗಳಾಗಿ ತಾಲೂಕು ಪಂಚಾಯತ್ ಅಧ್ಯಕ್ಷರಾದ ಶ್ರೀ ಭಾಸ್ಕರ ಬಿಲ್ಲವ ಮತ್ತು ಹೆಚ್ಚಿನ ಸದಸ್ಯರು ನೀಡಿದ ಅಭೂತಪೂರ್ವ ಸಹಕಾರ, ಸಕ್ರೀಯ ಭಾಗವಹಿಸುವಿಕೆ ಈ ಯಶಸ್ಸಿನ ಕಿರೀಟಕ್ಕೆ ಗರಿ ಇಟ್ಟಂತಿತ್ತು. ಇವರೊಂದಿಗೆ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಸದಸ್ಯರು ಸಂಪನ್ಮೂಲ ವ್ಯಕ್ತಿಗಳಾಗಿ ಈ ಪ್ರಕ್ರಿಯೆಯಲ್ಲಿ ಜೊತೆಗೂಡಿ ಈ ಯಶಸ್ಸಿಗೆ ಪಾಲುದಾರರಾದರು. ಅಲ್ಲದೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ನವೋದಯ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಹಾಗೂ ಸ್ತ್ರೀಶಕ್ತಿ ಗುಂಪುಗಳ ಉತ್ಸಾಹಭರಿತ ಭಾಗವಹಿಸುವಿಕೆ, ಸಂಬಂಧಪಟ್ಟ ಇಲಾಖೆ, ಗುಂಪುಗಳು ಅವರ ಭಾಗವಹಿಸುವಿಕೆಗೆ ನೀಡಿದ ಸಹಕಾರ ಈ ಗ್ರಾಮ ಸಭೆಗಳು ಅರ್ಥಪೂರ್ಣವಾಗಲು ಸಹಕಾರಿಯಾಯಿತು. ಇವುಗಳೊಂದಿಗೆ ಸ್ಥಳೀಯವಾಗಿ ಗ್ರಾಮ ಪಂಚಾಯತ್‌ಗಳು ತೋರಿದ ವಿಶೇಷ ಆಸಕ್ತಿ, ನಮ್ಮ ಊರಿನ ಜನರಿಗೆ ಇದು ಅತ್ಯವಶ್ಯಕ ಎಂದು ತೋರಿದ ಕಾಳಜಿ ಇಂತಹ ಒಂದು ಯಶಸ್ವೀ ಗ್ರಾಮ ಸಭೆ ನಡೆಯಲು ಸಾಧ್ಯವಾಯಿತು. ಹಾಗೂ ಮಹಿಳಾ ಆಯೋಗದ ಸದಸ್ಯರಾದ ಶ್ರೀಮತಿ ಶ್ಯಾಮಲಾ ಭಂಡಾರಿ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು ವಿವಿಧ ಹಂತಕ್ಕೆ ಈ ವಿಷಯವನ್ನು ಕೊಂಡೊಯ್ಯಲು ಸಹಕಾರಿಯಾಯಿತು.



**ಪ್ರಕ್ರಿಯೆಯ ಫಲಿತಾಂಶಗಳು**:

- ಮಹಿಳೆಯರು ಮತ್ತು ಮಕ್ಕಳು ಅವರ ವಿಷಯವನ್ನು ಪ್ರಸ್ತಾಪಿಸಲು ಸಾಧ್ಯವಾಯಿತು.
- ಮಹಿಳೆಯರು ಮತ್ತು ಮಕ್ಕಳು ಸಂಘಟಿತರಾಗಿ ಭಾಗವಹಿಸಲು ಸಾಧ್ಯವಾಯಿತು, ಪರಸ್ಪರ ಬೆಂಬಲ ಗಳಿಸಿದರು.
- ಜಾತಿ, ಮತ, ಪಂಥ, ವರ್ಗ, ವಯೋಮಾನ ಬೇಧವಿಲ್ಲದೇ ಭಾಗವಹಿಸಿದರು
- ವೈಯಕ್ತಿಕ ಕೌಟುಂಬಿಕ ವಿಷಯವಲ್ಲದೇ, ಮಹಿಳೆಯರು, ಮಕ್ಕಳ ಅಂತರಾಳದ ಸಮಸ್ಯೆಗಳು ಚರ್ಚೆಗೆ ಬಂದವು.
- ಮಹಿಳೆಯರು ಮತ್ತು ಮಕ್ಕಳು ತಮ್ಮ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಾಯಿತು



- ಮಹಿಳೆಯರು ಮತ್ತು ಮಕ್ಕಳ ವಿಷಯಕ್ಕೆ ಆದ್ಯತೆ ಮತ್ತು ಪರಿಹಾರ ಕಂಡುಕೊಳ್ಳಲು ಸಾಧ್ಯವಾಯಿತು. ತಮ್ಮದೇ ಪರಿಹಾರ ಕಂಡುಕೊಂಡರು.
- ಈಗಿರುವ ವ್ಯವಸ್ಥೆಗೆ ಪೂರಕವಾಗಿ ತಮಗೆ ಉತ್ತರದಾಯಿಯಾಗಿರುವ ರಚನೆ, ವ್ಯವಸ್ಥೆ ರೂಪಿಸಿಕೊಂಡರು (ಮಹಿಳಾ ಮಿತ್ರ, ಮಕ್ಕಳ ಮಿತ್ರ, ಜಾರಿಪಡೆ)
- ಇಡೀ ಗ್ರಾಮ, ತಾಲೂಕಿನಲ್ಲಿ ಜಾಗೃತಿ ಉಂಟಾಯಿತು.



- ಮಹಿಳೆಯರು ಮತ್ತು ಮಕ್ಕಳು ಗ್ರಾಮ ಸಭೆಯ ಕ್ರಿಯಾಶೀಲ ಸದಸ್ಯರಾದರು.
- ಮಹಿಳೆಯರು ಮತ್ತು ಮಕ್ಕಳ ಸಮಸ್ಯೆಗಳನ್ನು ಅವರೇ ಗುರುತಿಸಿ ಹೇಳಬಲ್ಲರು, ಅದಕ್ಕೆ ಅವರೇ ಪರಿಹಾರ ಸೂಚಿಸಬಲ್ಲರು ಎಂಬ ನಂಬಿಕೆ ಒಡಮೂಡಿತು
- ಹಣಕಾಸು–ಸಾಲ–ಉದ್ಯೋಗ ಎಂಬು ಗುಂಪು ಕಟ್ಟಿದ ಮಹಿಳೆಯರು ಅವರ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ, ರಾಜಕೀಯ ವಿಷಯಗಳ, ಪ್ರಶ್ನೆಗಳನ್ನು ಪರಸ್ಪರ ಹಂಚಿಕೊಳ್ಳಲು ಸಾಧ್ಯವಾಯಿತು
- ಬಿಡಿ–ಬಿಡಿಯಾಗಿದ್ದ ಗುಂಪುಗಳು ಒಂದುಗೂಡಿ, ನಾವು ಒಂದೂರಿನವರು ಎಂದು ಕಲೆತು ಮಾತನಾಡಲಾಯಿತು
- ಆರ್ಥಿಕೇತರ, ಸಾಮಾಜಿಕ, ಗಂಭೀರ ವಿಷಯಗಳನ್ನು ರಾಜಕೀಯ ವೇದಿಕೆಗೆ ತರಲು ಸಾಧ್ಯವಾಯಿತು.

**ಚಿಕ್ಕ ಚಿಕ್ಕ ತೊರೆಗಳು ತುಂಬಿ ಹರಿದ ನದಿಗಳು**



ಗ್ರಾಮ ಪಂಚಾಯತ್ ವ್ಯಾಪ್ತಿಯ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಒಂದು ರೀತಿಯಲ್ಲಿ ಸಂಭ್ರಮ! ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು, ತಮಗೋಸ್ಕರ ಇರುವ ವೇದಿಕೆಯನ್ನು ಸೂಕ್ತವಾಗಿ ಉಪಯೋಗಿಸಿಕೊಳ್ಳಲು ಗ್ರಾಮ ಸಭೆಗೆ ಬಂದ ಪ್ರತಿಯೊಬ್ಬರೂ ಅತ್ಯುತ್ಸಾಹದಲ್ಲಿದ್ದರು. ಪಂಚಾಯತ್ ವ್ಯಾಪ್ತಿಯ ವಿವಿಧ ಪ್ರದೇಶಗಳಿಂದ ನೂರರಿಂದ ಏಳು ನೂರರವರೆಗೆ ಮಹಿಳೆಯರು–ಮಕ್ಕಳು ಗ್ರಾಮ ಸಭೆಗೆ ಸಾಗರದಂತೆ ಹರಿದು ಬಂದರು. ಮಹಿಳೆಯರು–ಮಕ್ಕಳು ಕಾಲ್ನಡಿಗೆಯಲ್ಲಿ ಆ ಹಳ್ಳಿಯ ರಸ್ತೆಗಳಲ್ಲಿ ನಡೆಯುತ್ತಾ, ಎಲ್ಲಾ ಮಹಿಳೆಯರನ್ನು ಗ್ರಾಮಸಭೆಗೆ ಕರೆಯುತ್ತಾ, ರಕ್ಷಣೆಯ ಕುರಿತಾಗಿ ಇರುವ ಸಮಸ್ಯೆಗಳನ್ನು ಬಿಂಬಿಸುವ ಘೋಷಣೆಗಳನ್ನು ಕೂಗುತ್ತಾ ನೂರಾರು ಜನ ಮಹಿಳೆಯರು–ಮಕ್ಕಳು ತಮ್ಮ ಗ್ರಾಮಸಭೆಗೆ ಸೇರಿಕೊಂಡರು.

**ಕಟ್ಟುವೆವು ನಾವು ಕಂಕಣವ**

ಗ್ರಾಮ ಪಂಚಾಯತ್‌ನ ಎದುರಿಗಿರುವ ವಿದ್ಯುತ್ ಕಂಬಕ್ಕೆ ಮಕ್ಕಳು ಮತ್ತು ಮಹಿಳೆಯರು ಎತ್ತಿದ ಸಮಸ್ಯೆಗಳ



ಸಂಕೇತವಾಗಿ ಪ್ರತಿಯೊಂದು ಸಮಸ್ಯೆಗೆ ಒಂದರಂತೆ ಕೆಂಪುಪಟ್ಟಿಯನ್ನು ಮಕ್ಕಳು ಮತ್ತು ಮಹಿಳೆಯರು ಒಂದೊಂದಾಗಿ ಕಟ್ಟಿದರು. ಅಲ್ಲದೇ ಮಹಿಳೆಯರು ಮತ್ತು ಮಕ್ಕಳು ತಮ್ಮ ಸಮಸ್ಯೆಗಳ ಸಂಕೇತವಾಗಿ ಗ್ರಾಮ ಪಂಚಾಯತ್‌ನ ಎದುರು ಸಮಸ್ಯೆಗಳ ಕುರುಹಾಗಿ ಕೆಂಪುಪಟ್ಟಿ ಕಟ್ಟುತ್ತೇವೆ, ಪರಿಹಾರವಾದಾಗ ಬಿಳಿಪಟ್ಟಿ ಕಟ್ಟೋಣ ಎಂದು ಗ್ರಾಮ ಪಂಚಾಯತ್‌ನ್ನು ಅವರ ಉತ್ತರದಾಯಿಯನ್ನಾಗಿ ಮಾಡಿದರು. ಭಾಗವಹಿಸಿದ್ದ ಪ್ರತಿಯೊಬ್ಬರೂ ಈ ಪ್ರಕ್ರಿಯೆಯನ್ನು ಬಹಳ ಗೌರವಯುತವಾಗಿ, ಬದ್ಧತೆಯಿಂದ, ತಮ್ಮದೇ ಎಂಬ ಜವಾಬ್ದಾರಿಯಿಂದ ಮಾಡಿದ್ದು ಎಲ್ಲರ ಗಮನ ಸೆಳೆಯಿತು. ಅಲ್ಲದೇ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಯ ಸಮಸ್ಯೆಗಳನ್ನು ಗುರುತು ಹಾಕುವಲ್ಲಿ ಮತ್ತು ಪರಿಹರಿಸುವಲ್ಲಿ ಗ್ರಾಮದ ಪ್ರಥಮ ಪ್ರಜೆಯಾದ ತನ್ನದು ಮೊದಲ ಜವಾಬ್ದಾರಿ ಎಂದು ಕೆಲವು ಗ್ರಾಮ ಪಂಚಾಯತ್ ಅಧ್ಯಕ್ಷರು ಸ್ವಪ್ರೇರಣೆಯಿಂದ ಮೊಟ್ಟಮೊದಲು ಕೆಂಪುಪಟ್ಟಿಯನ್ನು ಕಂಬಕ್ಕೆ ಕಟ್ಟಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಅಲ್ಲದೇ ಸಮಸ್ಯೆಗಳನ್ನು ಗುರುತಿಸಿ ಪಂಚಾಯತ್ ಎದುರು ಕಟ್ಟಿದ ಕೆಂಪುಪಟ್ಟಿಯನ್ನು ಗ್ರಾಮ ಪಂಚಾಯತ್‌ನವರು ಇದು ಒಂದು ರೀತಿಯಲ್ಲಿ ನಮಗೆ ಕಂಕಣ ಕಟ್ಟಿದಂತೆ, ನಮ್ಮಲ್ಲಿ ಎಷ್ಟು ಸಮಸ್ಯೆಗಳಿವೆ ಎಂಬುದಕ್ಕೆ ಗುರುತು ಮತ್ತು ಇದು ಸದಾ ನಮಗೆ ಎಚ್ಚರಿಕೆ ನೀಡುತ್ತದೆ ಎಂದು ಧನಾತ್ಮಕವಾಗಿ ಇದಕ್ಕೆ ಸ್ಪಂದಿಸಿದ್ದು ವಿಶಿಷ್ಟವಾದುದು.



**ಬನ್ನಿ ಮಾತಾಡೋಣ, ನಾವು ನೀವು ಸೇರಿ ದಾರಿ ಹುಡುಕೋಣ**

ಅನೇಕ ಗ್ರಾಮ ಪಂಚಾಯತ್‌ಗಳ ಅಧ್ಯಕ್ಷರು, ಸದಸ್ಯರು ಗ್ರಾಮ ಸಭೆಗೆ ಆಗಮಿಸುತ್ತಿದ್ದ ಮಹಿಳೆಯರನ್ನು ಸಂಭ್ರಮದಿಂದ ಆಹ್ವಾನಿಸಿದರು. ಕೆಲವೊಂದು ಹಿರಿಯ ಮಹಿಳೆಯರಿಗೆ 'ಬನ್ನಿ ಅಕ್ಕ, ನೀವು ಮೊಟ್ಟಮೊದಲ ಬಾರಿಗೆ ನಮ್ಮ ಗ್ರಾಮ ಸಭೆಗೆ ಬರುತ್ತಿದ್ದೀರಿ, ನಮಗೆ ತುಂಬಾ ಹೆಮ್ಮೆ ಅನ್ನಿಸುತ್ತಿದೆ' ಎಂದರು. ನಾವೆಲ್ಲರೂ ಕೈಜೋಡಿಸಿ ಇಂತಹ ಸಮಸ್ಯೆಗಳನ್ನು ಬಗೆಹರಿಸೋಣ ಎಂದರು.

**ಸುಮಾರು 13,413 ಮಹಿಳೆಯರು ಮತ್ತು 7,361 ಮಕ್ಕಳು ಸಕ್ರೀಯ ಭಾಗವಹಿಸುವಿಕೆಯಲ್ಲಿ ನಡೆದ ಈ ಗ್ರಾಮ ಸಭೆಯಲ್ಲಿ ಮಕ್ಕಳು ಮತ್ತು ಮಹಿಳೆಯರು ಒಟ್ಟಾಗಿ ಎತ್ತಿದ ವಿವಿಧ ರೀತಿಯ 1,178 ಸಮಸ್ಯೆಗಳು, ಅವರು ಈ ಸಮಸ್ಯೆಗಳನ್ನು ಗ್ರಾಮ ಸಭೆಯಲ್ಲಿ ಮಂಡಿಸಿದ ರೀತಿ ಎಲ್ಲರ ಮನ ಮುಟ್ಟುವಂತಿತ್ತು. ಒಟ್ಟು 22,514 ಜನ ಮಹಿಳೆಯರು–ಮಕ್ಕಳು–ಪುರುಷರು ಈ ಗ್ರಾಮ ಸಭೆಗೆ ಸಾಕ್ಷಿಯಾದರು.**



ಮಕ್ಕಳು ಮತ್ತು ಮಹಿಳೆಯರು ಈ ಗ್ರಾಮ ಸಭೆಯಲ್ಲಿ ಎತ್ತಿದ ಪ್ರಶ್ನೆಗಳು ನಮಗೆ ರಸ್ತೆ ಕೊಡಿ, ಮನೆ ಕೊಡಿ, ಸಬ್ಸಿಡಿ ನೀಡಿ, ಸೇತುವೆ ಕೊಡಿ, ಪಂಚಾಯತ್‌ಗೆ ಎಷ್ಟು ಹಣ ಬಂದಿದೆ, ಏನು ಮಾಡುತ್ತೀರಿ? ಇವುಗಳಲ್ಲ!

ಮಹಿಳೆಯರಿಗೆ ಮತ್ತು ಮಕ್ಕಳಿಗೆ ಎಂತಹ ಅಪಾಯಕಾರಿ ಪರಿಸ್ಥಿತಿ ನಮ್ಮ ಹಳ್ಳಿಗಳಲ್ಲಿ ಏನೇನಿದೆ?

**ಅಪಾಯಕಾರಿ ಕಾಡುದಾರಿಗಳು, ಕಲ್ಲು ಗಣಿಗಾರಿಕೆಗಳಿಂದ ಆದ ಅಪಾಯಕಾರಿ ಹೊಂಡ, ಗ್ರಾಮ ಸಭೆ, ಗ್ರಾಮ ಪಂಚಾಯತ್‌ಗೂ ತಿಳಿಸದೇ ನಿರ್ಮಿಸಿದ ಕೃಷಿಹೊಂಡಕ್ಕೆ ಮಕ್ಕಳು, ಜಾನುವಾರುಗಳು ಬಿದ್ದು ಆಗುತ್ತಿರುವ ಸಾವು–ನೋವು, ಅಪಾಯಕಾರಿ ಕೊಜೆಹೊಂಡಗಳು, ರಕ್ಷಣಾ ಬೇಲಿ ಇಲ್ಲದ ಮದಗಗಳು, ಕೆರೆಗಳು, ಬಾವಿಗಳು, ತರುಣ–ತರುಣಿಯರ ಹರೆಯದ ಸಮಸ್ಯೆಗಳಿಂದ ಆಗುತ್ತಿರುವ ತಲ್ಲಣಗಳು, ಮೊಬೈಲ್–ತಂತ್ರಜ್ಞಾನ–ಅಂತರ್ಜಾಲ–ಮಾದ್ಯಮಗಳ ದುರ್ಬಳಕೆಯ ದುಷ್ಪರಿಣಾಮಗಳು, ಸಾರ್ವಜನಿಕ ಸ್ಥಳಗಳಲ್ಲಿ, ಶೌಚಾಲಯಗಳಲ್ಲಿ ಆಗುತ್ತಿರುವ ಕಸಿವಿಸಿಗಳು, ಬಸ್‌ನಿಲ್ದಾಣ, ಬಸ್‌ಗಳಲ್ಲಿ ನಡೆಯುವ ಕಿರುಕುಳ, ಮಹಿಳೆಯರಿಗೆ ಮನೆಗಳಲ್ಲಿ ನಡೆಯುವ ಹಿಂಸೆ, ಮದ್ಯಪಾನದಿಂದಾಗುತ್ತಿರುವ ಅನಾಹುತ, ತಲೆಯೆತ್ತಿರುವ ಹತ್ತಾರು ಅನಧಿಕೃತ ಮದ್ಯ ಮಾರಾಟ ಹಾಗೂ ಮಟ್ಕಾದಂಧೆ, ಜನ ಸಂಚರಿಸುವ ಕಗ್ಗತ್ತಲು ಪ್ರದೇಶಗಳಿಗೆ ದಾರಿದೀಪ ಇವುಗಳು!**




ರಕ್ಷಣೆಯ ಕುರಿತಾಗಿ ಗ್ರಾಮ ಮಟ್ಟದಲ್ಲಿ ರಚಿಸಬಹುದಾದ ಅಗತ್ಯವಿರುವ ವಿವಿಧ ವ್ಯವಸ್ಥೆಗಳನ್ನೂ ಸಹ ಅವರೇ ಸೂಚಿಸಿದರು!

**ಭೌತಿಕ ಅಪಾಯಕಾರಿ ವಲಯಗಳಿಗೆ ರಕ್ಷಣಾ ತಡೆಗೋಡೆ, ಅಗತ್ಯ ಪ್ರದೇಶಗಳಿಗೆ ಬಸ್ ವ್ಯವಸ್ಥೆ, ದಾರಿದೀಪ ಇವುಗಳೊಂದಿಗೆ ಮಹಿಳೆಯರಿಗೆ, ಮಕ್ಕಳಿಗೆ ಇರುವ ಕೆಲವು ಗೌಪ್ಯವಾದ, ವೈಯಕ್ತಿಕ, ಎಲ್ಲರೊಂದಿಗೆ ಹೇಳಿಕೊಳ್ಳಲಾರದಂತಹ ಸಮಸ್ಯೆಗಳನ್ನು ಹೇಳಿಕೊಳ್ಳಲು ಮಕ್ಕಳ ಮಿತ್ರರು ಮತ್ತು ಮಹಿಳಾ ಮಿತ್ರರು; ಪಂಚಾಯತ್ ಮಟ್ಟದಲ್ಲಿ ಎತ್ತಿದ ಸಮಸ್ಯೆಗಳ ಪರಿಹಾರಗಳ ಅನುಸರಣೆಗಾಗಿ ಗ್ರಾಮ ಮಟ್ಟದ ಜಾರಿಪಡೆಗಳು, ತಾಲೂಕು ಮಟ್ಟದ ಜಾರಿ ಪಡೆಗಳು; ಪಂಚಾಯತ್ ಮಟ್ಟದಲ್ಲಿ ತಮ್ಮ ಊರಿನ ಮಕ್ಕಳ ಮತ್ತು ಮಹಿಳೆಯರ ರಕ್ಷಣೆಗೆ, ಒಮ್ಮೆ ಯಾವುದೇ ಘಟನೆಗಳು ಸಂಭವಿಸಿದರೆ ಅವುಗಳ ಸತ್ಯಾಸತ್ಯತೆಯ ಶೋಧನೆಗೆ ಕಾವಲು ಸಮಿತಿ ರಚನೆ, ಮಹಿಳೆಯರಿಗೆ ಮತ್ತು ಮಕ್ಕಳಿಗೆ ಬೇರೆಯವರಲ್ಲಿ ನೇರವಾಗಿ ಹೇಳಿಕೊಳ್ಳಲಾಗದಂತಹ ಸಮಸ್ಯೆ, ನೇರವಾಗಿ ಹೇಳಿಕೊಳ್ಳದೇ ಇರುವಂತಹ ಪರಿಸ್ಥಿತಿ ಇರುವಾಗ ಅದಕ್ಕೆ ಪರಿಹಾರ ಕಂಡುಕೊಳ್ಳಲು ಅಂಚೆಪೆಟ್ಟಿಗೆ ವ್ಯವಸ್ಥೆ, ಸಂಕಷ್ಟದ ಸಮಯದಲ್ಲಿ ತಕ್ಷಣದಲ್ಲಿ ಸಂಪರ್ಕಿಸಲು ಅಗತ್ಯವಿರುವಾಗ ಸಹಾಯಕ್ಕಾಗಿ ಕರೆ ಮಾಡಲು ಉಚಿತ ಸಂಚಾರಿ ಅಥವಾ ಸ್ಥಿರ ದೂರವಾಣಿ ವ್ಯವಸ್ಥೆ ಇವುಗಳ ಅಗತ್ಯತೆಯನ್ನು ಗ್ರಾಮ ಸಭೆಗಳಲ್ಲಿ ಎತ್ತಿ ಹೇಳಿ ಈ ವ್ಯವಸ್ಥೆಗಳಿಗಾಗಿ ಸಂಬಂಧಪಟ್ಟವರನ್ನು ಒತ್ತಾಯಿಸಿದರು. ಅಲ್ಲದೇ ಹದಿಹರೆಯದ ವಯಸ್ಸಿನಲ್ಲಿ ಆಗುವ ಬದಲಾವಣೆಗಳ ಕುರಿತಾಗಿ ಮಕ್ಕಳಿಗೆ ತರಬೇತಿ, ಮೊಬೈಲ್–ತಂತ್ರಜ್ಞಾನ–ಅಂತರ್ಜಾಲ–ಮಾದ್ಯಮಗಳ ದುರ್ಬಳಕೆಯ ದುಷ್ಪರಿಣಾಮಗಳ ಕುರಿತಾಗಿ ಮಾಹಿತಿ ಇವುಗಳ ಅಗತ್ಯತೆಯನ್ನೂ ಸಹ ಎತ್ತಿ ಹೇಳಿದರು.**



ಕುಂದಾಪುರ ತಾಲೂಕು ಪಂಚಾಯತ್‌ನ ಅಧ್ಯಕ್ಷರು ಮತ್ತು ಕೆಲವು ಸದಸ್ಯರು ಈ ಎಲ್ಲಾ ಗ್ರಾಮ ಸಭೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ, ಈ ಗ್ರಾಮ ಸಭೆಯ ಮಹತ್ವದ ಕುರಿತು ಮಾಹಿತಿ ನೀಡಿದ್ದು, ತಮ್ಮ ಪಾತ್ರವನ್ನು ಗುರುತಿಸಿಕೊಂಡು, ಈ ಗ್ರಾಮ ಸಭೆಗೆ, ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ವಿಷಯದಲ್ಲಿ ತಮ್ಮ ಬದ್ಧತೆಯನ್ನು ತೋರಿದ್ದು ಇದರ ಗಂಭೀರತೆಯನ್ನು ಎತ್ತಿ ಹೇಳುವಲ್ಲಿ ಜನರಿಗೆ ಕನ್ನಡಿಯಾಯಿತು.

### ಗ್ರಾಮ ಸಭೆಯ ನಂತರದ ತಕ್ಷಣದ ಪ್ರತಿಕ್ರಿಯೆ:

ಇಷ್ಟು ಜನ ಸೇರಿದರೇ!
ನಿಜವಾಗಿಯೂ ಉತ್ತಮ ಚರ್ಚೆ, ಸೂಕ್ತ ನಿರ್ಧಾರಗಳು
ನಮ್ಮದೇ ಜನ, ನಮ್ಮದೇ ಪರಿಹಾರ
ನಿರಂತರ ನಡೆಯಬೇಕೆಂಬ ಒತ್ತಾಸೆ
ಗ್ರಾಮ ಸಭೆಗೂ ಒಂದು ದೊಡ್ಡ ಸಂಭ್ರಮ
ಮಾತು, ಚರ್ಚೆ, ಪರಿಹಾರ ಏನು?
ಮೆರವಣಿಗೆ, ನಡೆದಾಟ, ಕೆಂಪುಪಟ್ಟಿ, ಬಿಳಿಪಟ್ಟಿ, ಎಲ್ಲೆಡೆ ಸಂಭ್ರಮ–ಸಂತೃಪ್ತಿಯ ಗ್ರಾಮ ಸಭೆ





**ಈ ಗ್ರಾಮ ಸಭೆಗಳ ಪರಿಣಾಮಗಳು:**

ಆರ್ಥಿಕವಲ್ಲದೇ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ವಿಷಯಗಳ ಬಗ್ಗೆ ಗ್ರಾಮ ಸಭೆ ಚರ್ಚೆ ಮೊದಲ ಬಾರಿಗೆ ಸಾಧ್ಯವಾಯಿತು. ಗ್ರಾಮ ಸಭೆ ಯಶಸ್ವಿಯಾಗಬಲ್ಲದು ಎಂಬುದನ್ನು ಮಹಿಳೆಯರು ಮತ್ತು ಮಕ್ಕಳು ಸಾಧಿಸಿ ತೋರಿಸಿದರು.

ಮಹಿಳಾ ಮತ್ತು ಮಕ್ಕಳಿಗೆ ಒಂದು ಅಧಿಕೃತ ವೇದಿಕೆ ಸದೃಢಗೊಂಡಿದೆ. ಮಹಿಳೆಯರಿಗೆ ಮತ್ತು ಮಕ್ಕಳಿಗೆ ತಮ್ಮ ಸಂಘಟಿತ ಶಕ್ತಿಯ ಅರಿವಾಯಿತು. ಗ್ರಾಮ ಸಭೆ ಸದೃಢಗೊಂಡಿತು.



ಗ್ರಾಮ ಸಭೆಗಳು ಚೆನ್ನಾಗಿ ನಡೆಯುವುದಿಲ್ಲ, ಗ್ರಾಮ ಸಭೆಯಲ್ಲಿ ಜನರು ಭಾಗವಹಿಸುವುದಿಲ್ಲ ಮತ್ತು ಜನರು ಸಿನಿಕರಾಗಿದ್ದಾರೆ; ಕೇವಲ ಆರ್ಥಿಕ, ವಸತಿ, ಸಾಲ ಅಥವಾ ಕೃಷಿಗೆ ಸಂಬಂಧಿಸಿದಂತೆ ಪ್ರಯೋಜನ ಸಿಗುವುದಿದ್ದರೆ, ಮಾತ್ರ ಜನರು ಗ್ರಾಮ ಸಭೆಗಳಲ್ಲಿ ಭಾಗವಹಿಸುತ್ತಾರೆ; ಅವರು ಒಂದು ಗ್ರಾಮವಾಗಿ ಅಥವಾ ಸಮುದಾಯವಾಗಿ ಆಲೋಚಿಸುವುದಿಲ್ಲ; ಗ್ರಾಮ ಸಭೆಗಳೆಂದರೆ ಕೇವಲ ಗಲಾಟೆ-ಗೌಜಿನ ತಾಣಗಳಾಗಿವೆ, ಯಾವುದೇ ಸಮಸ್ಯೆಗಳಿಗೆ ಇಲ್ಲಿ ಪರಿಹಾರಗಳು ಸಿಗುವುದಿಲ್ಲ ಎಂಬ ಭಾವನೆಗಳು ಬದಲಾಗಿ; ನಿಜವಾದ ಕಾಳಜಿಯಿರುವ ವಿಷಯಗಳನ್ನು ಕೈಗೆತ್ತಿಕೊಂಡರೆ, ಅವುಗಳ ಕುರಿತಾಗಿ ಚರ್ಚಿಸಲು ಸೂಕ್ತ ತಯಾರಿ ನಡೆಸಿದರೆ, ಈ ಸಮಸ್ಯೆಗಳಿಗೆ ಸಾಧ್ಯತೆ ಇರುವ ಸೂಕ್ತ ಪರಿಹಾರಗಳನ್ನು ಗಂಭೀರವಾಗಿ, ಅರ್ಥಪೂರ್ಣವಾಗಿ ಚರ್ಚಿಸಿದರೆ, ಅವುಗಳಿಗೆ ಸ್ಪಂದಿಸಿ ರಚನಾತ್ಮಕವಾದ ಆಲೋಚನೆಗಳನ್ನು ಹಂಚಿಕೊಂಡರೆ, ಜನರು ತಪ್ಪದೇ ಗ್ರಾಮ ಸಭೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಾರೆ, ಗ್ರಾಮವಾಗಿ, ಸಮುದಾಯವಾಗಿ, ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಲ್ಲಿ ತಮ್ಮ ಬದ್ಧತೆಯನ್ನು ತೋರುತ್ತಾರೆ; ಅಲ್ಲದೇ ತಮ್ಮ ವಿಷಯಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊಳ್ಳುವ ವೇದಿಕೆಗಳನ್ನು ಸಕಾರಾತ್ಮಕವಾಗಿ ಉಪಯೋಗಿಸಿಕೊಳ್ಳುತ್ತಾರೆ ಎಂಬ ಅಭಿಪ್ರಾಯಗಳು ಎಲ್ಲೆಡೆ ವ್ಯಕ್ತವಾಯಿತು. ಉತ್ತಮ ಜನಭಾಗವಹಿಸುವಿಕೆಯೊಂದಿಗೆ ವಿವಿಧ ಹಂತಗಳ ಸ್ಥಳೀಯ ಸರ್ಕಾರ ಸಕ್ರೀಯವಾಗಿ ಜೊತೆಗೂಡಿದರೆ ಗುಣಾತ್ಮಕ ಗ್ರಾಮ ಸಭೆ ನಡೆಸಬಹುದು ಎಂಬುದಕ್ಕೆ ಇದು ಮಾದರಿಯಾಯಿತು, ನಿದರ್ಶನವಾಯಿತು.

ಸಾಮಾನ್ಯವಾಗಿ ಗ್ರಾಮ ಸಭೆಗಳಲ್ಲಿ ಹೆಚ್ಚಾಗಿ ಪುರುಷರೇ ಭಾಗವಹಿಸುತ್ತಿದ್ದರು. ಆದರೆ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಅವರ ಸಮಸ್ಯೆಗಳ ಕುರಿತಾಗಿ ಧ್ವನಿ ಎತ್ತಲು, ಅದಕ್ಕೆ ಪರಿಹಾರ ಕಂಡುಕೊಳ್ಳಲು ಇದೊಂದು ಪ್ರತ್ಯೇಕವಾದ, ವಿಶಿಷ್ಟವಾದ ವೇದಿಕೆಯಾಗಿ ರೂಪುಗೊಂಡಿತು. ಈ ಗ್ರಾಮ ಸಭೆಗಳ ಮೂಲಕ ಅತ್ಯಂತ ಕಟ್ಟಕಡೆಯ ಸಮುದಾಯದ ಜನರ ಭಾಗವಹಿಸುವಿಕೆಯನ್ನೂ ಸಹ ಸಾಧ್ಯಗೊಳಿಸಬಹುದು ಎಂಬುದನ್ನು ಕಂಡುಕೊಳ್ಳಲಾಯಿತು.



ಸಾಮಾನ್ಯವಾಗಿ, ಎಲ್ಲಾ ಗ್ರಾಮ ಸಭೆಗಳಲ್ಲಿ ಚರ್ಚೆಯಾಗುವ, ಜನರು ಪ್ರಸ್ಥಾಪಿಸುವ ಸಮಸ್ಯೆಗಳು ಆರ್ಥಿಕ ಸಮಸ್ಯೆಗಳು, ಮೂಲಭೂತ ಸೌಕರ್ಯದ ಕುರಿತಾದ ಸಮಸ್ಯೆಗಳಾಗಿರುತ್ತಿದ್ದವು. ಆದರೆ ಮೊದಲ ಬಾರಿಗೆ ಈ ಗ್ರಾಮ ಸಭೆಯಲ್ಲಿ, ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳು, ವಿಷಯಗಳು ಚರ್ಚೆಯಾದವು.

ಈ ಗ್ರಾಮ ಸಭೆಗಳಿಂದ ಜನರು ತಮಗೋಸ್ಕರ ಇರುವ ವೇದಿಕೆಗಳಲ್ಲಿ ಭಾಗವಹಿಸುವಲ್ಲಿ, ಆ ಮೂಲಕ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಜವಾಬ್ದಾರಿ ತೆಗೆದುಕೊಳ್ಳುವಲ್ಲಿ ಮರುಶಕ್ತಿ ಪಡೆದರು; ಹಾಗೂ ತಮ್ಮ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತಾವೇ ಆಯ್ಕೆ ಮಾಡಿದ ಜನಪ್ರತಿನಿಧಿಗಳನ್ನು, ಸಂಬಂಧಪಟ್ಟ ಅಧಿಕಾರಿಗಳನ್ನು ಉತ್ತರದಾಯಿಯನ್ನಾಗಿ ಮಾಡಿದರು. ಅದರಲ್ಲೂ ಮಹಿಳಾ ಜನ್ರತಿನಿಧಿಗಳಿಗೆ ಮಹಿಳೆಯರ ಪರವಾಗಿ ಧ್ವನಿ ಎತ್ತಲು, ಸಮಸ್ಯೆಗಳ ಕುರಿತಾಗಿ ಚರ್ಚಿಸಲು ಈ ಗ್ರಾಮ ಸಭೆ ಬೆಂಬಲ ನೀಡಿತು, ಹಾಗೂ ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಯಿತು.

ಪತ್ರಿಕಾ ಮಾಧ್ಯಮದವರು ಅಗತ್ಯ ಪ್ರಚಾರ ಬೆಂಬಲ ನೀಡಿದರು. ಅದು ವಿಷಯ, ಸುದ್ದಿ ವಿಸ್ತಾರವಾಗಿ ಹರಡಲು ಅನುಕೂಲ ಮಾಡಿಕೊಟ್ಟಿತು.

**ಇದರ ಪರಿಣಾಮವಾಗಿ, ನಡೆದಂತಹ ಕೆಲವು ಗ್ರಾಮ ಸಭೆಗಳಲ್ಲಿ ಮಹಿಳೆಯರು ಮತ್ತು ಮಕ್ಕಳು ಎತ್ತಿದ ಸಮಸ್ಯೆಗಳಿಗೆ ತಕ್ಷಣದ ಪ್ರತಿಸ್ಪಂದನೆ, ಪರಿಹಾರ ಕಂಡುಕೊಳ್ಳಲಾಯಿತು!**



- ಗೋಳಿಹೊಳೆಯಲ್ಲಿ ಮತ್ತು ಬೇಳೂರು ನಡೆದ ರಕ್ಷಣೆಯ ಕುರಿತಾಗಿ ನಡೆದ ಮಕ್ಕಳ ಮತ್ತು ಮಹಿಳೆಯರ ವಿಶೇಷ ಗ್ರಾಮ ಸಭೆಯಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಇರುವ ಕೆಲವು ಗೌಪ್ಯವಾದ, ವೈಯಕ್ತಿಕ, ಎಲ್ಲರೊಂದಿಗೆ ಮುಕ್ತವಾಗಿ ಹೇಳಿಕೊಳ್ಳಲಾರದಂತಹ

ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ನಮಗೊಂದು ವ್ಯವಸ್ಥೆ ಬೇಕು ಎಂಬ ಬೇಡಿಕೆ ಇಟ್ಟರು. ಇದಕ್ಕೆ ತಕ್ಷಣ ಸ್ಪಂದಿಸಿದ ಗ್ರಾಮ ಪಂಚಾಯತ್ ಗ್ರಾಮ ಸಭೆ ನಡೆಯುತ್ತಿರುವಾಗಲೇ ಅಂಚೆ ಪೆಟ್ಟಿಗೆಯನ್ನು ತಂದು ಇಟ್ಟು, ಇದನ್ನು ಸಮಸ್ಯೆ ಸ್ಪಂದನಾ ಪೆಟ್ಟಿಗೆಯಾಗಿ ಮಾಡೋಣ. ಇದರಲ್ಲಿ ಹಾಕುವ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನಾವೆಲ್ಲರೂ ಕೈ ಜೋಡಿಸೋಣ, ನಮ್ಮ ಗ್ರಾಮವನ್ನು ಮಕ್ಕಳ ಮತ್ತು ಮಹಿಳಾ ಸ್ನೇಹಿ ಗ್ರಾಮವನ್ನಾಗಿ ಮಾಡಿ ಹೆಮ್ಮೆ ಪಡೋಣ ಎಂದರು.

- ಉಪ್ಪುಂದ ಗ್ರಾಮ ಪಂಚಾಯತ್‌ನ ರಕ್ಷಣೆಯ ಕುರಿತಾಗಿ ನಡೆದ ಮಕ್ಕಳ ಮತ್ತು ಮಹಿಳೆಯರ ವಿಶೇಷ ಗ್ರಾಮ ಸಭೆಯಲ್ಲಿ ಮಕ್ಕಳು ಒಂದು ಸಮಸ್ಯೆಯನ್ನು ಸಭೆಯ ಮುಂದಿಟ್ಟರು ಅದೆಂದರೆ ಉಪ್ಪುಂದ ಪ್ರದೇಶದಲ್ಲಿ ಶಾಲಾ ಕಾಲೇಜುಗಳಿಗೆ ಹೋಗಿ ಬರುವ ಪಾಸ್ ಹೊಂದಿರುವ ಮಕ್ಕಳಿಗೆ ಕೆ.ಎಸ್.ಆರ್.ಟಿ.ಸಿ. ಬಸ್‌ನವರು ಇತರ ಪ್ರಯಾಣಿಕರು ಹತ್ತಿದ ನಂತರ ಅವರನ್ನು ಹತ್ತಿಸುತ್ತಾರೆ. ಶಾಲಾ–ಕಾಲೇಜು ಮಕ್ಕಳಿಗೆ ರಿಯಾಯಿತಿ ದರದಲ್ಲಿ ಟಿಕೆಟ್ ನೀಡಬೇಕಾಗಿರುವುದರಿಂದ ಇತರ ಪ್ರಯಾಣಿಕರು ಬಸ್ ಹತ್ತಿದ ನಂತರ ಮಕ್ಕಳನ್ನು ಹತ್ತಿಸುತ್ತಾರೆ. ಇದರಿಂದ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತದೆ. ಇದನ್ನು ಕೇಳಿಸಿಕೊಂಡ ಈ ಸಭೆಯಲ್ಲಿ ಭಾಗವಹಿಸಿದ ಪೋಲೀಸ್ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತ್ ಇದಕ್ಕೆ ತಕ್ಷಣ ಸ್ಪಂದಿಸಿ ಕೆ.ಎಸ್.ಆರ್.ಟಿ.ಸಿ. ಡಿಪೋ ಮ್ಯಾನೇಜರ್‌ಗೆ ತಕ್ಷಣ ಅಲ್ಲಿಂದಲೇ ದೂರವಾಣಿ ಕರೆ ಮಾಡಿದರು. ಹಾಗೂ ಯಾವುದೇ ಬಸ್‌ಗಳಲ್ಲಿ ಮಕ್ಕಳ ಹಕ್ಕುಗಳಿಗೆ, ರಕ್ಷಣೆಗೆ ಧಕ್ಕೆಯಾಗುವಂತೆ ನಡೆದುಕೊಳ್ಳಬಾರದು. ಬಸ್ ಹತ್ತುವಾಗ ಮಕ್ಕಳಿಗೆ ಕೊನೆಯಲ್ಲಿ ಹತ್ತಬೇಕೆಂದು ಹೇಳಬಾರದು, ಇವತ್ತಿನಿಂದಲೇ ಇದು ಬದಲಾಗಬೇಕು ಎಂದು ಮಾಹಿತಿ ತಿಳಿಸುವ ಮೂಲಕ ಈ ಸಮಸ್ಯೆಗೆ ಪರಿಹಾರಕ್ಕೆ ಕ್ರಮ ಕೈಗೊಂಡಿದ್ದಾರೆ.

- ಬಳ್ಕೂರಿನಲ್ಲಿ ಒಂದು ಕುಟುಂಬದ ಸದಸ್ಯರಿಗೆ ಪಕ್ಕದ ಮನೆಯವರು ಪ್ರತಿನಿತ್ಯ ಅವಾಚ್ಯ ಶಬ್ದಗಳಿಂದ ಬಯ್ಯುವುದು, ಸುಮ್ಮಸುಮ್ಮನೆ ಜಗಳಕ್ಕೆ ಬರುವುದು ಹೀಗೆ ಕಿರುಕುಳ ಕೊಡುತ್ತಿದ್ದರು. ಮಹಿಳಾ ಮತ್ತು ಮಕ್ಕಳ ಗ್ರಾಮ ಸಭೆಯಲ್ಲಿ ಇಂತಹ ವಿಷಯಗಳನ್ನೂ ಸಹ ಪ್ರಸ್ತಾಪಿಸಿದ್ದಾರೆ, ಅವುಗಳಿಗೂ ಕೂಡ ಈ ವ್ಯವಸ್ಥೆಯಲ್ಲಿ ಪರಿಹಾರ ಕಂಡುಕೊಳ್ಳಬಹುದು ಎಂಬುದನ್ನು ಗಮನಿಸಿದ ಆ ಕುಟುಂಬದವರು, ಆಯ್ಕೆಯಾದ ಮಹಿಳಾ ಮಿತ್ರ, ಕಾವಲು ಪಡೆ ಸದಸ್ಯರೊಂದಿಗೆ ಈ ವಿಷಯ ಹಂಚಿಕೊಂಡರು. ಅಲ್ಲದೇ ಗ್ರಾಮ ಸಭೆಯ ನಂತರದ ಜಾರಿಪಡೆಯಲ್ಲಿ ಇದನ್ನು ಚರ್ಚಿಸಲಾಯಿತು. ಜಾರಿ ಪಡೆ ಸದಸ್ಯರು, ಗ್ರಾಮ ಪಂಚಾಯತ್‌ನವರೆಲ್ಲಾ ಸೇರಿ ಈ ವಿಷಯವನ್ನು ಎರಡೂ ಕುಟುಂಬದವರೊಂದಿಗೆ ಚರ್ಚಿಸಿ ಇತ್ಯರ್ಥಗೊಳಿಸಿದ್ದಾರೆ.

- ಬೆಳ್ವೆ ಗ್ರಾಮ ಪಂಚಾಯತ್‌ನಲ್ಲಿ ರಕ್ಷಣೆಯ ಕುರಿತಾಗಿ ನಡೆದ ಮಕ್ಕಳ ಮತ್ತು ಮಹಿಳೆಯರ ವಿಶೇಷ ಗ್ರಾಮ ಸಭೆಯಲ್ಲಿ ಮಹಿಳೆಯರು ತಮ್ಮ ಊರಿನಲ್ಲಿ ವ್ಯಾಪಕವಾಗಿ ನಡೆಯುವ ಮದ್ಯಮಾರಾಟದಿಂದಾಗುವ ಸಮಸ್ಯೆಗಳನ್ನು ಎತ್ತಿ ಅದನ್ನು ನಿಲ್ಲಿಸುವಂತೆ ಬೇಡಿಕೆ ಇಟ್ಟಿದ್ದರು. ಇದನ್ನು ನಿಲ್ಲಿಸುವ ನಿರ್ಣಯ ಮಾಡಿದ ಗ್ರಾಮ ಪಂಚಾಯತ್ ಗ್ರಾಮ ಸಭೆ ಮುಗಿದ ಕೆಲವೇ ದಿನಗಳಲ್ಲಿ ಪೋಲಿಸ್ ಇಲಾಖೆ ಮತ್ತು ಅಬಕಾರಿ ಇಲಾಖೆಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿತು. ಅಕ್ರಮವಾಗಿ ಮದ್ಯ ಮಾರಾಟವನ್ನು ತಡೆಗಟ್ಟುವ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ.

## ನೂರಾರು ಸಲಹೆಗಳು ಹತ್ತಾರು ದಾರಿಗಳು

ಈ ಗ್ರಾಮ ಸಭೆಗಳಲ್ಲಿ ಚರ್ಚಿಸಿದಂತೆ ಮತ್ತು ನಿರ್ಧರಿಸಿದಂತೆ ಮಹಿಳೆಯರು ಮತ್ತು ಮಕ್ಕಳು ತಮ್ಮ ತಮ್ಮ ಪ್ರದೇಶಗಳಲ್ಲಿ ತಮಗೆ ಸೂಕ್ತವಾದ ಅರ್ಹ ಮಕ್ಕಳ ಮಿತ್ರರು, ಮಹಿಳಾ ಮಿತ್ರರನ್ನು ಆಯ್ಕೆ ಮಾಡಿಕೊಂಡರು. ಅಲ್ಲದೇ ತಮ್ಮ ಸಮಸ್ಯೆಗಳಿಗೆ ಸ್ಪಂದಿಸುವ ಕಾವಲು ಪಡೆಯನ್ನೂ ಸಹ ರಚಿಸಿಕೊಂಡರು. ರಕ್ಷಣೆಯ ಕುರಿತಾಗಿ ರೂಪಿಸಿಕೊಂಡ ಈ ವ್ಯವಸ್ಥೆಗಳು ಸೂಕ್ತವಾಗಿ ಕಾರ್ಯನಿರ್ವಹಿಸುವಲ್ಲಿ ಅವರಿಗೆ ಅಗತ್ಯ ಮಾಹಿತಿ ಮತ್ತು ತರಬೇತಿಗಳನ್ನು ನೀಡಬೇಕು ಎಂದು ಪ್ರಸ್ತಾಪಿಸಿದರು.

ಗ್ರಾಮ ಸಭೆಯಲ್ಲಿ ಎತ್ತಿದ ಸಮಸ್ಯೆಗಳ ಪರಿಹಾರಕ್ಕಾಗಿ ಕೈಗೊಂಡ ಕ್ರಮಗಳ ಅನುಸರಣೆಯನ್ನು ಪರಿಶೀಲಿಸಲು ಮತ್ತು ಪರಿಹಾರಕ್ಕಾಗಿ ಒತ್ತಾಯಿಸಲು ಗ್ರಾಮ ಮಟ್ಟದ ಜಾರಿಪಡೆಯನ್ನು ರಚಿಸಿಕೊಳ್ಳಲಾಯಿತು. ಹಾಗೂ ಇದೇ ರೀತಿ ತಾಲೂಕು ಜಾರಿಪಡೆಯನ್ನೂ ರಚಿಸಬೇಕೆಂಬುದನ್ನು ನಿರ್ಧರಿಸಲಾಯಿತು.



ಈ ಗ್ರಾಮ ಸಭೆಯು ಕೇವಲ ಒಂದು ಕಾರ್ಯಕ್ರಮವಾಗಿ ನಿಲ್ಲಬಾರದು; ಇದಕ್ಕೆ ನಿರಂತರತೆ ಇರಬೇಕು. ಇದು ಜನಸ್ನೇಹಿ, ಜನಪರ ಆಲೋಚನೆಯಾಗಿ ಸದಾ ನಡೆಯಬೇಕು. ಇದಕ್ಕೆ ಸಂಬಂಧಿಸಿದಂತೆ ಈ ಪ್ರಕ್ರಿಯೆಗೆ ಅಗತ್ಯ ಮುನ್ನಡೆ ನೀಡಲು ಕೆಲವೊಂದು ವ್ಯವಸ್ಥೆಗಳು, ತರಬೇತಿಗಳ ಕುರಿತಾಗಿ ತಾಲೂಕು ಪಂಚಾಯತ್, ಸಿ.ಡಬ್ಲ್ಯೂ.ಸಿ. ಸಂಸ್ಥೆಯು ಜೊತೆಗೂಡಿ ಅಗತ್ಯ ರೂಪು-ರೇಷೆಗಳನ್ನು ಚರ್ಚಿಸಿ ಕಾರ್ಯತಂತ್ರ ರೂಪಿಸಲಾಯಿತು.

ಅದರಂತೆ, ಗ್ರಾಮ ಪಂಚಾಯತ್‌ಗಳಲ್ಲಿ ಮಕ್ಕಳು ಮತ್ತು ಮಹಿಳೆಯರೇ ಆಯ್ಕೆ ಮಾಡಿಕೊಂಡ ಮಕ್ಕಳ ಮಿತ್ರ ಮತ್ತು ಮಹಿಳಾ ಮಿತ್ರರಿಗೆ ಅವರ ಗ್ರಾಮಗಳಲ್ಲಿ ಎತ್ತಿದ ಸಮಸ್ಯೆಗಳು, ಮಕ್ಕಳ ಮತ್ತು ಮಹಿಳೆಯರ ರಕ್ಷಣೆಯಲ್ಲಿ ಅವರ ಪಾತ್ರ ಮತ್ತು ಜವಾಬ್ದಾರಿ, ಗ್ರಾಮ ಪಂಚಾಯತ್ ಮಟ್ಟದಲ್ಲಿ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಇರಬೇಕಾದ ವ್ಯವಸ್ಥೆಗಳು, ಮಕ್ಕಳ ಮತ್ತು ಮಹಿಳೆಯರ ಹಕ್ಕುಗಳ ಮತ್ತು ರಕ್ಷಣೆಯ ಕುರಿತಾದ ಕಾನೂನುಗಳ ಸ್ಥೂಲ ಮಾಹಿತಿಗಳನ್ನೊಳಗೊಂಡ ಮೂರು ದಿನಗಳ ತರಬೇತಿಯನ್ನು ನೀಡಲಾಯಿತು. ಈ ತರಬೇತಿಯಲ್ಲಿ ಒಟ್ಟು 242 ಮಕ್ಕಳ ಮಿತ್ರ ಮತ್ತು ಮಹಿಳಾ ಮಿತ್ರರಿಗೆ ತರಬೇತಿ ನೀಡಲಾಯಿತು. ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿ ಶಿಬಿರಾರ್ಥಿಗಳಿಗೆ ಅಗತ್ಯ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ

ಮಕ್ಕಳ ಮಿತ್ರರು ಹಾಗೂ ಮಹಿಳಾ ಮಿತ್ರರು ಸಂಘಟನೆಯಾಗಿ ಕೆಲಸ ಮಾಡಬೇಕು, ಆಗ ನಾವು ಎಂತಹ ಸಮಸ್ಯೆಯನ್ನಾದರೂ ಬಗೆಹರಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಅಲ್ಲದೇ ಈ ಕಾರ್ಯಾಗಾರದ ಕೊನೆಯಲ್ಲಿ ಗ್ರಾಮ ಸಭೆಯಲ್ಲಿ ಎತ್ತಿದ ಸಮಸ್ಯೆಗಳ ಪರಿಹಾರದ ಅನುಸರಣೆಗೆ ಯೋಜನೆಗಳನ್ನು ತಯಾರಿಸಿಕೊಂಡರು.

ಅಲ್ಲದೇ ಈಗಾಗಲೇ ಗ್ರಾಮ ಸಭೆಯಲ್ಲಿ ಎತ್ತಿದ ಸಮಸ್ಯೆಗಳನ್ನು ಇಲಾಖಾವಾರು ವಿಂಗಡಿಸಿ, ವಿವಿಧ ಇಲಾಖೆಗಳ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಪೋಲಿಸ್ ಇಲಾಖಾ ಮುಖ್ಯಸ್ಥರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಅಧಿಕಾರಿಗಳು ಇವರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಲಾಯಿತು ಹಾಗೂ ಅವುಗಳನ್ನು ಪರಿಹರಿಸುವಲ್ಲಿ ಅವರು ಕೈಗೊಳ್ಳಬೇಕಾದ ಕಾರ್ಯಗಳು, ಅವರ ಪಾತ್ರ ಮತ್ತು ಜವಾಬ್ದಾರಿಗಳು ಅಲ್ಲದೇ ಅಗತ್ಯವಿರುವ ಮಾಹಿತಿ ಹಂಚಿಕೆ ಮತ್ತು ತರಬೇತಿಗಳ ಕುರಿತಾಗಿಯೂ ಅವರೊಂದಿಗೆ ಚರ್ಚಿಸಲಾಯಿತು.



ಅಲ್ಲದೇ ಕರ್ನಾಟಕ ರಾಜ್ಯ ಮಹಿಳಾ ಅಧ್ಯಕ್ಷರೊಂದಿಗೂ ಈ ಬಗ್ಗೆ ಪ್ರಸ್ತಾಪಿಸಲಾಯಿತು. ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಮಾನಸ ಅವರು "ಮಹಿಳೆಯರು ಸಂವಿಧಾನಾತ್ಮಕ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಆದ್ದರಿಂದ ಈ ರೀತಿಯ ವೇದಿಕೆಗಳು ತುಂಬಾ ಮುಖ್ಯ ಹಾಗೂ ಅಗತ್ಯವಾದುದು. ರಾಜ್ಯ ಮಹಿಳಾ ಆಯೋಗವು ಖಂಡಿತವಾಗಿಯೂ ಇಂತಹ ಪ್ರಕ್ರಿಯೆಗೆ ಸಂಪೂರ್ಣ ಬೆಂಬಲ ನೀಡುತ್ತದೆ." ಎಂದು ಭರವಸೆ ನೀಡಿದರು.

**ಸವಾಲುಗಳು:**

- ಮಹಿಳಾ ಮತ್ತು ಮಕ್ಕಳ ನಿರಂತರ ತರಬೇತಿ
- ಅಗತ್ಯ ಪೂರಕ ವ್ಯವಸ್ಥೆ ರಚನೆ
- ರಾಜ್ಯದ ನೀತಿ-ನಿಯಮಗಳ ಮೇಲೆ ಪರಿಣಾಮ ಬೀರಲು ಯತ್ನ
- ಪುರುಷರಿಗೆ, ಸಾಮಾನ್ಯ ಗ್ರಾಮ ಸಭೆಗಳಿಗೆ ಸವಾಲು ಆದೀತು
- ರಾಜಕೀಯ, ಸ್ಥಾಪಿತ ಹಿತಾಸಕ್ತಿಗಳ ಒತ್ತಡ
- ಈಗ ಗ್ರಾಮ ಸಭೆಯ ಪರಿಸ್ಥಿತಿಯ ಬಗ್ಗೆ ಮತ್ತು ಸರ್ಕಾರದ ಸುತ್ತೋಲೆ
- ಇದು ನಿತ್ಯ ನಿರಂತರವಾದುದಾದ್ದರಿಂದ ಇದರ ಸಾಮರ್ಥ್ಯಾಭಿವೃದ್ಧಿ ಮತ್ತು ಅದಕ್ಕೆ ಪೂರಕ ಸಂಪನ್ಮೂಲ

**ಉಪಸಂಹಾರ:**

ಇಡೀ ಗ್ರಾಮ ಸಭೆಯ ಪ್ರಕ್ರಿಯೆಯಲ್ಲಿ ಮಕ್ಕಳ ಮತ್ತು ಮಹಿಳೆಯರ ಸಕ್ರೀಯ ಭಾಗವಹಿಸುವಿಕೆಯು ಉತ್ತಮ ಜನಭಾಗವಹಿಸುವಿಕೆಯೊಂದಿಗೆ ವಿವಿಧ ಹಂತಗಳ ಸ್ಥಳೀಯ ಸರ್ಕಾರ ಸಕ್ರೀಯವಾಗಿ ಜೊತೆಗೂಡಿದರೆ ಗುಣಾತ್ಮಕ ಗ್ರಾಮ ಸಭೆ ನಡೆಸಬಹುದು ಎಂಬುದಕ್ಕೆ ಇದೊಂದು ಅತ್ಯುತ್ತಮ ಮಾದರಿಯಾಗಿದೆ. ಈ ನಿಟ್ಟಿನಲ್ಲಿ ಕುಂದಾಪುರ ತಾಲೂಕು ಪಂಚಾಯತ್ ತೆಗೆದುಕೊಂಡ ನಿಲುವು ಎಲ್ಲರ ಮೆಚ್ಚುಗೆಗೆ, ಪ್ರಶಂಸೆಗೆ ಪಾತ್ರವಾಗಿದೆ. ಮಕ್ಕಳು–ಮಹಿಳೆಯರೊಂದಿಗೆ ನಡೆದ ಅರ್ಥಪೂರ್ಣ ಚರ್ಚೆಗಳು, ನೀಡಿದ ಮಾಹಿತಿಗಳು, ಹಂಚಿಕೊಂಡ ವಿಷಯಗಳು, ಮಕ್ಕಳು ಮತ್ತು ಮಹಿಳೆಯರು ಇಂತಹ ಒಂದು ನಿಲುವನ್ನು, ಪ್ರಕ್ರಿಯೆಯನ್ನು ನಿರೀಕ್ಷಿಸುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿದೆ. ಸರ್ಕಾರದಿಂದ ಯಾವುದಾದರೊಂದು ರಚನಾತ್ಮಕವಾದ ಆಲೋಚನೆಯನ್ನು ಅವರು ಕಾತರದಿಂದ ಎದುರು ನೋಡುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ. ಇಡೀ ಪ್ರಕ್ರಿಯೆಯ ಕುರಿತಾಗಿ ಜನರಿಂದ ಉತ್ತಮ ಅಭಿಪ್ರಾಯ ಎಲ್ಲೆಡೆ ವ್ಯಕ್ತವಾಗಿದೆ.




ಸ್ಥಳೀಯ ಸಮಸ್ಯೆಗಳನ್ನು ಸ್ಥಳೀಯವಾಗಿ ನೈಜ ಕಾಳಜಿಯೊಂದಿಗೆ ಚರ್ಚಿಸಿದರೆ ಅವುಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಸಮಸ್ಯೆಗಳಿಂದ ನಿಜವಾಗಿ ಭಾದಿತರಾದವರು ಅದಕ್ಕೆ ಪರಿಹಾರ ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಶಕ್ತರಾಗಬೇಕು ಹಾಗೂ ಅವುಗಳ ಕುರಿತಾಗಿ ಚರ್ಚಿಸಿ, ಪರಿಹಾರ ಕಂಡುಕೊಳ್ಳುವಲ್ಲಿ ಸ್ವಯಂ ನಿರ್ಧಾರದ ಹಕ್ಕನ್ನು ಪ್ರತಿಪಾದಿಸಲು ವೇದಿಕೆ ರೂಪಿಸಿಕೊಳ್ಳಬೇಕು ಮತ್ತು ಅದನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಬೇಕು ಎಂಬುದಕ್ಕೆ ಈ ಗ್ರಾಮ ಸಭೆ ಸ್ಪಷ್ಟ ನಿದರ್ಶನವಾಗಿದೆ.

ಮಕ್ಕಳ ಮತ್ತು ಮಹಿಳೆಯರ ರಕ್ಷಣೆ ತಮ್ಮ ಆಧ್ಯ ಕರ್ತವ್ಯ, ತಮ್ಮನ್ನು ಆಯ್ಕೆ ಮಾಡಿದ ಜನರಿಗೆ ತಾವು ಉತ್ತರದಾಯಿಗಳು ಎಂಬ ಆಲೋಚನೆಗಳಿಗೆ ಸ್ಥಳೀಯ ಸರ್ಕಾರಗಳ ಜನಪ್ರತಿನಿಧಿಗಳು ಸ್ಪಂದಿಸಿದ್ದಾರೆ. ಜನರ ನೈಜ ಕಾಳಜಿಯುಕ್ತ ಆಶೋತ್ತರಗಳನ್ನು ಗಮನಿಸಿ, ಅವರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದರೆ; ಪಕ್ಷ ರಹಿತ ರಾಜಕೀಯ ಅವಕಾಶಗಳನ್ನು ಸೂಕ್ತವಾಗಿ ಬಳಸಿಕೊಂಡು, ಸಮರ್ಪಕ ರಾಜಕೀಯ ಇಚ್ಛಾಶಕ್ತಿಯನ್ನು ತೋರುವಲ್ಲಿ ತಮ್ಮ ಬದ್ಧತೆಯನ್ನು ತೋರಿದರೆ ಇಡೀ ಗ್ರಾಮವನ್ನು, ತಾಲೂಕನ್ನು ಜನಸ್ನೇಹಿಯಾಗಿ ರೂಪಿಸಿ, ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯ ಎಂಬುದು ಸಾಬೀತಾಗಿದೆ. ಈ ಪರಿಕಲ್ಪನೆಗಳು ವಿಕೇಂದ್ರೀಕರಣಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೆ ಬಹಳ ಹತ್ತಿರವಾಗಿವೆ.

ಹೆಚ್ಚಿನ ಎಲ್ಲಾ ಗ್ರಾಮ ಸಭೆಗಳ ವರದಿಯನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿ, ಇಡೀ ಪ್ರಕ್ರಿಯೆಗೆ, ಈ ವ್ಯವಸ್ಥೆ ರೂಪಿಸಿಕೊಳ್ಳುವುದಕ್ಕೆ, ಅದರ ವ್ಯಾಪಕ ಪ್ರಚಾರಕ್ಕೆ ಮಾಧ್ಯಮ ಮಿತ್ರರು ನೀಡಿದ ಸಹಕಾರ ಅಭಿನಂದನೀಯ.

## ರಕ್ಷಣೆಯ ಕುರಿತಾಗಿ ಮಹಿಳೆಯರು ಮತ್ತು ಮಕ್ಕಳು ಸೂಚಿಸಿದ ವಿವಿಧ ವ್ಯವಸ್ಥೆಗಳು

ಮಹಿಳಾ ಮತ್ತು ಮಕ್ಕಳ ರಕ್ಷಣೆಯ ಕುರಿತಾದ ಗ್ರಾಮ ಸಭೆಗಳಲ್ಲಿ ಎತ್ತಿರುವ ಸಮಸ್ಯೆಗಳು ಪರಿಹಾರವಾಗಲು ಗ್ರಾಮ ಹಾಗೂ ತಾಲೂಕು ಮಟ್ಟದಲ್ಲಿ ಈಗಿರುವ ರಕ್ಷಣೆಯ ವ್ಯವಸ್ಥೆಗಳನ್ನು ಸಕ್ರೀಯಗೊಳಸಬೇಕು. ಅಲ್ಲದೇ ಅದಕ್ಕೆ ಪೂರಕವಾಗಿ ಕೆಲವು ಹೊಸ ರಚನೆಗಳನ್ನು ರೂಪಿಸಿಕೊಳ್ಳಬೇಕು ಎಂದು ಗ್ರಾಮ ಸಭೆಯಲ್ಲಿ ಚರ್ಚಿಸಿ, ನಿರ್ಧರಿಸಲಾಗಿತ್ತು. ಅವುಗಳ ವಿವರಗಳು ಹೀಗಿವೆ:




- **ಮಕ್ಕಳ ಮಿತ್ರ**: ಮಕ್ಕಳ ಸಮಸ್ಯೆಗಳಿಗೆ ಸ್ಪಂದಿಸುವ, ಅವರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅವರಿಗೆ ಸಹಕಾರಿಯಾಗುವಂತಹ ಮಕ್ಕಳೇ ಆಯ್ಕೆ ಮಾಡಿದ ಮಕ್ಕಳ ಸ್ನೇಹಿ ಪುರುಷ ಅಥವಾ ಮಹಿಳೆ.

- **ಮಹಿಳಾ ಮಿತ್ರ**: ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುವ, ಅವರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅವರಿಗೆ ಸಹಕಾರಿಯಾಗುವಂತಹ ಮಹಿಳೆಯರೇ ಆಯ್ಕೆ ಮಾಡಿದ ಮಹಿಳಾ ಸ್ನೇಹಿ ಮಹಿಳೆಯರು.

- **ಕಾವಲು ಪಡೆ**: ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಪ್ರದೇಶವಾರು ಮಕ್ಕಳು ಮತ್ತು ಮಹಿಳೆಯರು ಆಯ್ಕೆ ಮಾಡಿದ ಅವರ ರಕ್ಷಣೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವ ಮಕ್ಕಳ ಮತ್ತು ಮಹಿಳೆಯರ ಕಾವಲು ಪಡೆ.

- **ತಾತ್ಕಾಲಿಕ ಆಶ್ರಯ ವ್ಯವಸ್ಥೆ**: ಗ್ರಾಮ ಮಟ್ಟದಲ್ಲಿ ಮತ್ತು ತಾಲೂಕು ಮಟ್ಟದಲ್ಲಿ ಯಾವುದೇ ರೀತಿಯ ಸಮಸ್ಯೆ ಉಂಟಾದ ಮಕ್ಕಳು ಮತ್ತು ಮಹಿಳೆಯರಿಗೆ ಸುರಕ್ಷಿತತೆ ಒದಗಿಸುವ, ಭದ್ರತೆ ನೀಡುವ ಸೂಕ್ತ ವಸತಿ ವ್ಯವಸ್ಥೆ.

- **ಸತ್ಯಶೋಧನಾ ಸಮಿತಿ**: ಮಕ್ಕಳ–ಮಹಿಳೆಯರ ಮೇಲೆ ಶೋಷಣೆಯಾದಾಗ ಅಥವಾ ಅವರಿಗೆ ಅಪಾಯವುಂಟಾದಾಗ, ಸಮಸ್ಯೆ ಉಂಟಾದಾಗ ಇದಕ್ಕೆ ಸಂಬಂಧಪಟ್ಟಂತೆ ಘಟನೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಗ್ರಾಮ ಮಟ್ಟದ ಜಾರಿ ಪಡೆ ಮತ್ತು ಅಗತ್ಯವಿದ್ದರೆ ತಾಲೂಕು ಮಟ್ಟದ ಜಾರಿಪಡೆಯು ಸೂಕ್ತ ಮೇಲ್ವಿಚಾರಣಾ (ಸತ್ಯ ಶೋಧನಾ) ಸಮಿತಿ ರಚಿಸಬೇಕು.

- **ಸಹಾಯವಾಣಿ**: ಮಕ್ಕಳ–ಮಹಿಳೆಯರು ಅವರ ಸಂಕಷ್ಟದ ಸಮಯದಲ್ಲಿ ಅಗತ್ಯವಿರುವಾಗ ತಕ್ಷಣದ ಸಹಾಯಕ್ಕಾಗಿ ಕರೆ ಮಾಡಲು ತಾಲೂಕು ಮಟ್ಟದಲ್ಲಿ ಉಚಿತ ಕರೆಯ ಸೌಲಭ್ಯವಿರುವ ಸಂಚಾರಿ/ಸ್ಥಿರ ದೂರವಾಣಿ ವ್ಯವಸ್ಥೆ.

- **ಮಕ್ಕಳ ಮತ್ತು ಮಹಿಳೆಯರ ಅಂಚೆ ಪೆಟ್ಟಿಗೆ**: ಮಕ್ಕಳಿಗೆ/ಮಹಿಳೆಯರಿಗೆ ಬೇರೆಯವರಲ್ಲಿ ನೇರವಾಗಿ ಹೇಳಿಕೊಳ್ಳಲಾಗದಂತಹ ಸಮಸ್ಯೆ ಉಂಟಾದಾಗ, ನೇರವಾಗಿ ಹೇಳಿಕೊಳ್ಳದೇ ಇರುವಂತಹ ಪರಿಸ್ಥಿತಿ ಇರುವಾಗ ಅದಕ್ಕೆ ಪರಿಹಾರ ಕಂಡುಕೊಳ್ಳುವಲ್ಲಿ ಮಕ್ಕಳ / ಮಹಿಳಾ ಮಿತ್ರರನ್ನು ಸಂಪರ್ಕಿಸಲು ಇರುವ ವ್ಯವಸ್ಥೆ.

- **ಗ್ರಾಮ ಮಟ್ಟದ ಜಾರಿ ಪಡೆ**: ಮಕ್ಕಳು ಹಾಗೂ ಮಹಿಳೆಯರು ಎತ್ತಿದ ಸಮಸ್ಯೆಗಳನ್ನು ಚರ್ಚಿಸಿ, ಸೂಕ್ತ ಪರಿಹಾರ ಕಂಡುಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರ ಜೊತೆ ಅನುಸರಣೆ ಮಾಡಲು ರಚಿಸಿಕೊಂಡ ವ್ಯವಸ್ಥೆ.

## ಗ್ರಾಮ ಪಂಚಾಯತ್‌ನ ಪ್ರದೇಶವಾರು ಕಾವಲು ಪಡೆಯ ವಿವರಗಳು




- ಕಾವಲು ಪಡೆಯು ಮಕ್ಕಳು ಮತ್ತು ಮಹಿಳೆಯರು ಆಯ್ಕೆ ಮಾಡಿದ ಅವರ ಪ್ರತಿನಿಧಿಗಳು, ಆ ಪ್ರದೇಶದ ಗ್ರಾಮ ಪಂಚಾಯತ್ ಸದಸ್ಯರು, ಆ ಪ್ರದೇಶದ ಮಕ್ಕಳ ಮತ್ತು ಮಹಿಳಾ ಮಿತ್ರರನ್ನು ಒಳಗೊಂಡಿರುತ್ತದೆ.
- ತಮ್ಮ ಪ್ರದೇಶದ ಮಕ್ಕಳ, ಮಹಿಳೆಯರ ರಕ್ಷಣೆಗೆ ಸಂಬಂಧಿಸಿದಂತೆ ಸದಾ ಕಣ್ಣಾವಲಿಡುವುದು ಅದರ ಪ್ರಮುಖ ಜವಾಬ್ದಾರಿ.
- ಈ ಕಾವಲು ಪಡೆಯು ಆ ಪ್ರದೇಶದಲ್ಲಿ ಯಾವುದೇ ಅಹಿತಕರ, ಆಕಸ್ಮಿಕ ಅವಘಡಗಳು, ಘಟನೆಗಳು ಸಂಭವಿಸಿದಾಗ, ಆ ಘಟನೆಯ ಸಂಪೂರ್ಣ ವಿವರಗಳನ್ನು ಸಂಗ್ರಹಿಸುತ್ತದೆ. ಅಲ್ಲದೇ ಅದರ ಸತ್ಯಾಸತ್ಯತೆಗಳನ್ನು ಪರಿಶೀಲಿಸುತ್ತದೆ.
- ಅಗತ್ಯ ಸಂದರ್ಭಗಳಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಅತ್ಯವಶ್ಯವಿರುವ ತುರ್ತು ರಕ್ಷಣೆಯನ್ನು ಈ ಕಾವಲು ಪಡೆ ನೀಡುತ್ತದೆ.

## *ಗ್ರಾಮ ಮಟ್ಟದ ಜಾರಿ ಪಡೆಯ ವಿವರಗಳು*




- ಗ್ರಾಮ ಪಂಚಾಯತ್ ಅಧ್ಯಕ್ಷರು ಈ ಜಾರಿಪಡೆಯ ಅಧ್ಯಕ್ಷರಾಗಿರುತ್ತಾರೆ. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇದರ ಪದನಿಮಿತ್ತ (ಎಕ್ಸ್-ಅಫಿಷಿಯೋ) ಕಾರ್ಯದರ್ಶಿ ಆಗಿರುತ್ತಾರೆ.
- ಗ್ರಾಮ ಮಟ್ಟದ ಜಾರಿ ಪಡೆಯು ಪ್ರತಿ 2 ಅಥವಾ 3 ತಿಂಗಳಗೊಮ್ಮೆ ಸಭೆ ಸೇರಿ ಅವರ ಪಂಚಾಯತ್ ವ್ಯಾಪ್ತಿಯಲ್ಲಿ ಮಕ್ಕಳು ಮತ್ತು ಮಹಿಳೆಯರ ಎತ್ತಿದ ಸಮಸ್ಯೆಗಳು, ಅವರ ಸಶಕ್ತತೆಗೆ ಸಂಬಂಧಿಸಿದಂತೆ ಅಗತ್ಯವಿರುವ ಮಾಹಿತಿ, ಜಾಗೃತಿ, ತರಬೇತಿಗಳ ಕುರಿತಾಗಿ ಚರ್ಚಿಸುವುದು, ಹಾಗೂ ಅವುಗಳನ್ನು ಗ್ರಾಮ ಪಂಚಾಯತ್ ನೇತೃತ್ವದಲ್ಲಿ ಸಂಬಂಧಪಟ್ಟವರ ಮೂಲಕ ಆಗುವಂತೆ ನೋಡಿಕೊಳ್ಳುವುದು ಇದರ ಕರ್ತವ್ಯವಾಗಿರುತ್ತದೆ. ಅಲ್ಲದೇ ಮಕ್ಕಳು ಮತ್ತು ಮಹಿಳೆಯರು ಎತ್ತಿದ ಸಮಸ್ಯೆಗಳನ್ನು ಚರ್ಚಿಸಿ, ಅವುಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವ ಪ್ರಕ್ರಿಯೆಯ ಅನುಸರಣೆಯೂ ಇದರ ಪ್ರಮುಖ ಜವಾಬ್ದಾರಿ ಆಗಿರುತ್ತದೆ.
- ಪಂಚಾಯತ್ ವ್ಯಾಪ್ತಿಯಲ್ಲಿ ಎಲ್ಲಾ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಅಗತ್ಯ ರಕ್ಷಣೆ ಸಿಗುತ್ತಿದೆಯೇ ಎಂಬುದರ ಮೇಲ್ವಿಚಾರಣೆ, ಸಿಗುವಂತೆ ನೋಡಿಕೊಳ್ಳುವುದು, ಯಾವುದೇ ಸಂದರ್ಭದಲ್ಲಿ ಮಕ್ಕಳ ಮತ್ತು ಮಹಿಳೆಯರ ರಕ್ಷಣೆಗೆ, ಅವರ ಹಕ್ಕುಗಳಿಗೆ ಕುಂದು ಬರದಂತೆ ನೋಡಿಕೊಳ್ಳುವುದು ಗ್ರಾಮ ಮಟ್ಟದ ಜಾರಿ ಪಡೆಯ ಜವಾಬ್ದಾರಿ.

### *ತಾಲೂಕು ಮಟ್ಟದ ಜಾರಿಪಡೆಯ ವಿವರಗಳು*




- ತಾಲೂಕು ಪಂಚಾಯತ್ ಅಧ್ಯಕ್ಷರು ಈ ಜಾರಿಪಡೆಯ ಅಧ್ಯಕ್ಷರಾಗಿರುತ್ತಾರೆ. ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಇದರ ಪದನಿಮಿತ್ತ (ಎಕ್ಸ್–ಅಫಿಷಿಯೋ) ಕಾರ್ಯದರ್ಶಿ ಆಗಿರುತ್ತಾರೆ.
- ತಾಲೂಕು ಮಟ್ಟದ ಜಾರಿ ಪಡೆಯು ಪ್ರತಿ 2 ಅಥವಾ 3 ತಿಂಗಳಿಗೊಮ್ಮೆ ಸಭೆ ಸೇರಿ ಅವರ ತಾಲೂಕು ವ್ಯಾಪ್ತಿಯಲ್ಲಿ ಮಕ್ಕಳು ಮತ್ತು ಮಹಿಳೆಯರ ಎತ್ತಿದ ಸಮಸ್ಯೆಗಳು, ಅವರ ಸಶಕ್ತತೆಗೆ ಸಂಬಂಧಿಸಿದಂತೆ ಅಗತ್ಯವಿರುವ ಮಾಹಿತಿ, ಜಾಗೃತಿ, ತರಬೇತಿಗಳ ಕುರಿತಾಗಿ ಚರ್ಚಿಸುವುದು, ಹಾಗೂ ಅವುಗಳನ್ನು ತಾಲೂಕು ಪಂಚಾಯತ್ ನೇತೃತ್ವದಲ್ಲಿ ಸಂಬಂಧಪಟ್ಟವರ ಮೂಲಕ ಆಗುವಂತೆ ನೋಡಿಕೊಳ್ಳುವುದು ಇದರ ಕರ್ತವ್ಯವಾಗಿರುತ್ತದೆ. ಅಲ್ಲದೇ ಮಕ್ಕಳು ಮತ್ತು ಮಹಿಳೆಯರು ಎತ್ತಿದ ಸಮಸ್ಯೆಗಳನ್ನು ಚರ್ಚಿಸಿ, ಅವುಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವ ಪ್ರಕ್ರಿಯೆಯ ಅನುಸರಣೆಯೂ ಇದರ ಪ್ರಮುಖ ಜವಾಬ್ದಾರಿ ಆಗಿರುತ್ತದೆ.
- ತಾಲೂಕು ವ್ಯಾಪ್ತಿಯಲ್ಲಿ ಎಲ್ಲಾ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಅಗತ್ಯ ರಕ್ಷಣೆ ಸಿಗುತ್ತಿದೆಯೇ ಎಂಬುದರ ಮೇಲ್ವಿಚಾರಣೆ, ಸಿಗುವಂತೆ ನೋಡಿಕೊಳ್ಳುವುದು, ಯಾವುದೇ ಸಂದರ್ಭದಲ್ಲಿ ಮಕ್ಕಳ ಮತ್ತು ಮಹಿಳೆಯರ ರಕ್ಷಣೆಗೆ, ಅವರ ಹಕ್ಕುಗಳಿಗೆ ಕುಂದು ಬರದಂತೆ ನೋಡಿಕೊಳ್ಳುವುದು ತಾಲೂಕು ಮಟ್ಟದ ಜಾರಿ ಪಡೆಯ ಜವಾಬ್ದಾರಿ.

## ಮಕ್ಕಳ ಮತ್ತು ಮಹಿಳಾ ಸ್ನೇಹಿ ತಾಲೂಕಿನ ವಿವಿಧ ವ್ಯವಸ್ಥೆಗಳ ನಡುವಿನ ಉತ್ತಮ ಸಂಪರ್ಕ ಕೊಂಡಿಗಳು



## ಈ ವಿಶೇಷ ಗ್ರಾಮ ಸಭೆಗಳಲ್ಲಿ ಮಹಿಳೆಯರು ಮತ್ತು ಮಕ್ಕಳು ಎತ್ತಿದ ಪ್ರಮುಖ ಸಮಸ್ಯೆಗಳ ಸ್ಥೂಲ ಚಿತ್ರಣ

| ಕ್ರ.ಸಂ. | ಸಮಸ್ಯೆಗಳು | ಯಾರು ಎತ್ತಿದ್ದು | ಎಷ್ಟು ಪಂಚಾಯತ್ | ಸೂಚಿತ ಪರಿಹಾರಗಳು | ಯಾರು ಜವಾಬ್ದಾರರು |
|---|---|---|---|---|---|
| 1. | ಕೆಲವು ಪ್ರದೇಶಗಳ ಅಂಗಡಿಗಳಲ್ಲಿ, ಗೂಡಂಗಡಿಗಳಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಾರೆ. ಇದರಿಂದಾಗಿ ಸಮಸ್ಯೆಯುಂಟಾಗುತ್ತದೆ | ಮಹಿಳೆಯರು ಮಕ್ಕಳು | **24ಗ್ರಾಮ ಪಂಚಾಯತ್**<br>• ಹಕ್ಲಾಡಿ, ಮಡಾಮಕ್ಕಿ<br>• ಬೆಳ್ವೆ, ಆಜ್ರಿ, ಮೊಳಹಳ್ಳಿ<br>• ಕೆದೂರು, ಗಂಗೊಳ್ಳಿ,<br>• ತಲ್ಲೂರು<br>• ನಾವುಂದ, ಹೆಂಗವಳ್ಳಿ<br>• ಕಿರಿಮಂಜೇಶ್ವರ<br>• ಹಾರ್ದಳ್ಳಿಮಂಡಳ್ಳಿ<br>• ಕೆರಾಡಿ, ಹಳ್ಳಿಹೊಳೆ<br>• ಜಡ್ಕಲ್, ಗೋಳಿಹೊಳೆ<br>• ಹೆಮ್ಮಾಡಿ, ಕಾಳಾವರ,<br>• ಕಾಲ್ತೋಡು,<br>• ಕಂಬದಕೋಣೆ,<br>• ಚಿತ್ತೂರು, ಯಡ್ತರೆ,<br>• ಹೇರೂರು, ಕೊಲ್ಲೂರು, | ಅಂಗಡಿಗಳಿಗೆ ಇರುವ ಪರವಾನಿಗೆಯನ್ನೇ ರದ್ದುಗೊಳಿಸಬೇಕು. ಅನಧಿಕೃತ ಮದ್ಯ ಮಾರಾಟಗಳನ್ನು ಅಬಕಾರಿ ಇಲಾಖೆಯವರು ದಾಳಿ ನಡೆಸಿ ಇಂತಹವುಗಳನ್ನು ನಿಲ್ಲಿಸಬೇಕು. | ಅಬಕಾರಿ ಇಲಾಖೆ, ಗ್ರಾಮ ಪಂಚಾಯತ್ |
| 2. | ದೊಡ್ಡವರ ಕುಡಿತದಿಂದಾಗಿ ಮಹಿಳೆಯರಿಗೆ, ಮಕ್ಕಳಿಗೆ ಸಮಸ್ಯೆ ಉಂಟಾಗುತ್ತದೆ. ಕುಡಿದು ಬಂದು ಗಲಾಟೆ ಮಾಡುತ್ತಾರೆ. ಕೆಲವು ಬಾರ್‌ಗಳಿಂದ ಸಮಸ್ಯೆ ಉಂಟಾಗುತ್ತದೆ. | ಮಹಿಳೆಯರು ಮಕ್ಕಳು | | ಬಾರ್‌ಗಳನ್ನು ಮುಚ್ಚಬೇಕು<br><br>ಮದ್ಯಪಾನ ಮುಕ್ತ ಗ್ರಾಮವನ್ನಾಗಿ ಮಾಡಬೇಕು ರಾತ್ರಿ ಸಮಯದಲ್ಲಿ ಕುಡಿದು ಗಲಾಟೆ ಮಾಡುವವರ ಮೇಲೆ ಪೋಲಿಸರು ನಿಗಾ ಇಡಬೇಕು | ಅಬಕಾರಿ ಇಲಾಖೆ, ಪೋಲಿಸ್ ಇಲಾಖೆ, ಗ್ರಾಮ ಪಂಚಾಯತ್ |
| 3. | ಮಕ್ಕಳು ಬಾರ್‌ಗಳಿಗೆ ಹೋಗಿ ಕುಡಿಯುತ್ತಾರೆ, ಧೂಮಪಾನ ಮಾಡುತ್ತಾರೆ.<br><br>ಕೆಲವೊಮ್ಮೆ ಮಕ್ಕಳನ್ನು ದೊಡ್ಡವರು ಸಾರಾಯಿ, ಸಿಗರೇಟ್ ತರಲೆಂದು ಕಳುಹಿಸಿದಾಗ ಮಕ್ಕಳೂ ಕುಡಿಯುತ್ತಾರೆ, ಧೂಮಪಾನ ಮಾಡುತ್ತಾರೆ. | ಮಕ್ಕಳು | **6 ಗ್ರಾಮ ಪಂಚಾಯತ್**<br><br>• ಮಡಾಮಕ್ಕಿ<br>• ಗೋಳಿಹೊಳೆ<br>• ಹಂಗಳೂರು<br>• ಅಮಾಸೆಬೈಲು<br>• ಕಾಲ್ತೋಡು<br>• ತಲ್ಲೂರು | ಎಲ್ಲಾ ಬಾರ್‌ಗಳಿಗೆ ಸೀಗರೇಟ್ ಮಾರಾಟಗಾರರಿಗೆ ಯಾವುದೇ ಸಂದರ್ಭದಲ್ಲಿಯೂ ಮಕ್ಕಳು ಬಂದರೆ, ದೊಡ್ಡವರಿಗೆ ಬೇಕೆಂದು ಕೇಳಿ ಮಕ್ಕಳು ಬಂದರೂ ಕೊಡಬಾರದು ಎಂದು ಕಡ್ಡಾಯ ಮಾಡಬೇಕು. ಎಲ್ಲಿಯಾದರೂ ಈ ರೀತಿಯಲ್ಲಿ ಮಕ್ಕಳಿಗೆ ಕೊಡುವುದು ಕಂಡುಬಂದಲ್ಲಿ ಆ ಅಂಗಡಿಯ ಮಾಲಿಕರ | ಗ್ರಾಮ ಪಂಚಾಯತ್ ಮತ್ತು ಪೋಲಿಸ್ ಇಲಾಖೆಯವರು ಜಂಟಿಯಾಗಿ |

| ಕ್ರ.ಸಂ. | ಸಮಸ್ಯೆಗಳು | ಯಾರು ಎತ್ತಿದ್ದು | ಎಷ್ಟು ಪಂಚಾಯತ್ | ಸೂಚಿತ ಪರಿಹಾರಗಳು | ಯಾರು ಜವಾಬ್ದಾರರು |
|---|---|---|---|---|---|
| | | | | ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. | |
| 4. | ಶಾಲೆಯ ವಿದ್ಯಾರ್ಥಿಗಳು ಸಿಗರೇಟ್ ಸೇದುತ್ತಾರೆ, ಡ್ರಗ್ಸ್ ಉಪಯೋಗಿಸುತ್ತಾರೆ. | ಮಕ್ಕಳು | **2 ಗ್ರಾಮ ಪಂಚಾಯತ್**<br>• ಹಂಗಳೂರು<br>• ಬಸ್ರೂರು | | |
| 5. | ಹಾಳು ಬಿದ್ದ ಕಟ್ಟಡ, ಫ್ಯಾಕ್ಟರಿ ಮುಂತಾದ ಕಡೆಗಳಲ್ಲಿ ಮಟ್ಕಾ ದಂಧೆ ನಡೆಯುತ್ತದೆ. ಅಲ್ಲದೇ ಇನ್ನಿತರ ಅನೈತಿಕ ಚಟುವಟಿಕೆಗಳನ್ನು ಮಾಡುತ್ತಾರೆ. | ಮಕ್ಕಳು | **4 ಗ್ರಾಮ ಪಂಚಾಯತ್**<br>• ಕಾಳಾವರ, ಗುಜ್ಜಾಡಿ, ಕೊಲ್ಲೂರು, ಬೆಳ್ವೆ | ಇಸ್ಪೀಟು ಆಡುವವರ/ ಮಟ್ಕಾ ದಂಧೆ ನಡೆಸುವವರ ಮೇಲೆ ಕ್ರಮ ಕೈಗೊಳ್ಳಬೇಕು. ಅನೈತಿಕ ಚಟುವಟಿಕೆ ಮಾಡುವವರ ಮೇಲೆ ಪೋಲೀಸ್ ಗಸ್ತು ತಿರುಗಿ ಆ ಚಟುವಟಿಕೆ ಮಾಡುವವರ ಮೇಲೆ ಕ್ರಮ ತೆಗೆದು – ಕೊಳ್ಳಬೇಕು | ಅಬಕಾರಿ ಇಲಾಖೆ, ಪೋಲೀಸ್ ಇಲಾಖೆ ಮತ್ತು ಗ್ರಾಮ ಪಂಚಾಯತ್ ಜಂಟಿಯಾಗಿ |
| 6. | ಶಾಲೆಯ ಆವರಣದೊಳಗಡೆ ಶಾಲಾ ಸಮಯದ ನಂತರ ಬಂದು ಕುಳಿತುಕೊಂಡು ಕುಡಿಯುತ್ತಾರೆ. ಕುಡಿದು ಬಾಟಲಿ ಬಿಸಾಡುತ್ತಾರೆ. ಶಾಲಾ ಮೈದಾನದಲ್ಲಿ ಒಡೆದ ಬಾಟಲಿ ಚೂರುಗಳು ಬಿದ್ದಿರುತ್ತವೆ. ಸಿಗರೇಟು ಸೇದುತ್ತಾರೆ. ಇಸ್ಪೀಟ್ ಎಲೆಗಳು, ಸಿಗರೇಟ್ ತುಂಡುಗಳು ಅಲ್ಲಿ ಬಿದ್ದಿರುತ್ತವೆ. ಇದರಿಂದ ನಮಗೆ ದಿನನಿತ್ಯ ತೊಂದರೆ ಆಗುತ್ತದೆ. | ಮಕ್ಕಳು | **10 ಗ್ರಾಮ ಪಂಚಾಯತ್**<br>• ಕೋಟೇಶ್ವರ, ಹಂಗಳೂರು, ತೆಕ್ಕಟ್ಟೆ, ಬಸ್ರೂರು, ಕಾವ್ರಾಡಿ, ಕೆರಾಡಿ, ಕೊಲ್ಲೂರು, ಕುಂಭಾಶಿ, ಚಿತ್ತೂರು, ಅಮಾಸೆಬೈಲು | ಶಾಲೆಯ ಆವರಣದಲ್ಲಿ ಶಾಲಾ ಸಮಯದ ನಂತರ ಯಾರೂ ಬರದಂತೆ ವ್ಯವಸ್ಥೆ ಮಾಡಬೇಕು | ಗ್ರಾಮ ಪಂಚಾಯತ್ ಹಾಗೂ ಶಾಲಾಭಿವೃದ್ಧಿ ಸಮಿತಿ, ಸಮುದಾಯದ ಕಾವಲುಪಡೆ |
| 7. | ಕೆಲವು ಬಸ್‌ಗಳ ಕಂಡಕ್ಟರ್‌ಗಳು ಬಸ್ ನಿಲ್ದಾಣದಲ್ಲಿ ನಿಂತಿರುವ ಹುಡುಗಿಯರ ಮೇಲೆ ನೆಲಗಡಲೆ ಸಿಪ್ಪೆ, ಟಿಕೆಟ್, | ಮಹಿಳೆಯರು ಮಕ್ಕಳು | **16 ಗ್ರಾಮ ಪಂಚಾಯತ್**<br>• ಹಂಗಳೂರು, ಬಸ್ರೂರು<br>• ಕೋಟೇಶ್ವರ, ಕಾವ್ರಾಡಿ | ಶಾಲೆಗೆ/ಕೆಲಸಕ್ಕೆ ಹೋಗುವ / ಬರುವ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಸ್ ವ್ಯವಸ್ಥೆ ಇರಬೇಕು. | ತಾ.ಪಂ. ಮತ್ತು ಗ್ರಾ.ಪಂ. ಬಸ್ ಮಾಲಿಕರೊಂದಿಗೆ ಮಾತುಕತೆ ನಡೆಸಬೇಕು |

| ಕ್ರ.ಸಂ. | ಸಮಸ್ಯೆಗಳು | ಯಾರು ಎತ್ತಿದ್ದು | ಎಷ್ಟು ಪಂಚಾಯತ್ | ಸೂಚಿತ ಪರಿಹಾರಗಳು | ಯಾರು ಜವಾಬ್ದಾರರು |
|---|---|---|---|---|---|
| | ಎಸೆಯುವುದು ಹೀಗೆ ಅಸಭ್ಯವಾಗಿ ವರ್ತಿಸುತ್ತಾರೆ. ಅಲ್ಲದೇ ಟಿಕೇಟ್ ಕೇಳುವಾಗ ಹುಡುಗಿಯರ ಮೈಮುಟ್ಟುತ್ತಾರೆ. | | • ಕೋಣಿ, ಸಿದ್ಧಾಪುರ<br>• ಹಕ್ಲಾಡಿ, ಬೇಳೂರು<br>• ಮೊಳಹಳ್ಳಿ, ಆಜ್ರಿ<br>• ಶಂಕರನಾರಾಯಣ<br>• ಹೊಸಂಗಡಿ, ತೆಕ್ಕಟ್ಟೆ<br>• ಕಾಲ್ತೋಡು<br>• ಕಿರಿಮಂಜೇಶ್ವರ | ಪೋಲಿಸರು ಎಚ್ಚರಿಕೆ ನೀಡಬೇಕು<br><br>ಮಹಿಳೆಯರಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಬೇಕು | ಅಥವಾ ಸರ್ಕಾರಿ ಬಸ್ ಸೇವೆ ಕೋರಿ ಅರ್ಜಿ<br><br>ಪೋಲಿಸ್ ಇಲಾಖೆ |
| 8. | ಪ್ರಮುಖವಾಗಿ ಶಾಲೆಗೆ/ಕೆಲಸಕ್ಕೆ ಹೋಗುವ / ಬರುವ ಸಮಯದಲ್ಲಿ ಬಸ್‌ಗಳಲ್ಲಿ ಹೋಗುವಾಗ ಜನಜಂಗುಳಿ ಇರುವುದರಿಂದ ಕಿಡಿಗೇಡಿಗಳು ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ಕಿರುಕುಳ ಕೊಡುತ್ತಾರೆ | ಮಕ್ಕಳು ಮಹಿಳೆಯರು | **15 ಗ್ರಾಮ ಪಂಚಾಯತ್**<br><br>• ಹಂಗಳೂರು, ಕೋಟೇಶ್ವರ<br>• ಕೋಣಿ, ತ್ರಾಸಿ, ನಾವುಂದ<br>• ಹಕ್ಲಾಡಿ, ತೆಕ್ಕಟ್ಟೆ, ಯಡ್ತರೆ<br>• ಆನಗಳ್ಳಿ, ಹೊಸಂಗಡಿ,<br>• ಬೀಜಾಡಿ, ನಾಡಾ,<br>• ಕಾಲ್ತೋಡು<br>• ಹೆಂಗವಳ್ಳಿ, ಜಡ್ಕಲ್ | ಬಸ್‌ಗಳಲ್ಲಿ ಮಹಿಳೆಯರು ಮುಂಬಾಗಿಲಿನಲ್ಲಿ ಮತ್ತು ಪುರುಷರು ಹಿಂಬಾಗಿಲಿನಲ್ಲಿ ಹತ್ತುವುದನ್ನು ಕಡ್ಡಾಯಗೊಳಿಸಬೇಕು. | ಪೋಲಿಸ್ ಇಲಾಖೆ |
| 9. | ಕೆಲವು ಸಾರ್ವಜನಿಕ ಸ್ಥಳಗಳಲ್ಲಿ, ಬಸ್ ನಿಲ್ದಾಣಗಳಲ್ಲಿ, ಜನ ಸಂಚಾರ ಕಡಿಮೆ ಇರುವ ಪ್ರದೇಶದಲ್ಲಿ, ನಿರ್ಜನ ಪ್ರದೇಶಗಳಲ್ಲಿ ಹುಡುಗರು ಚುಡಾಯಿಸುತ್ತಾರೆ. ಕೆಲವು ಕಡೆ ಗುಂಪಾಗಿ ನಿಂತುಕೊಂಡು ಹೆಸರು ಹೇಳಿ ಕರೆಯುವುದು, ಕೆಟ್ಟ ಕೆಟ್ಟ ಮಾತನಾಡುವುದು ಹೀಗೆ ರಗಳೆ ಕೊಡುತ್ತಾರೆ | ಮಕ್ಕಳು | **21 ಗ್ರಾಮ ಪಂಚಾಯತ್**<br>• ಕೋಟೇಶ್ವರ, ಹಂಗಳೂರು, ಕೋಣಿ, ಬೈಂದೂರು, ಗೋಳಿಹೊಳೆ, ಮರವಂತೆ, ಹಕ್ಲಾಡಿ, ಕಾಳಾವರ, ಕುಂಭಾಶಿ, ಆನಗಳ್ಳಿ, ತೆಕ್ಕಟ್ಟೆ, ಕಾಲ್ತೋಡು, ಕೆರ್ಗಾಲ್, ಕಿರಿಮಂಜೇಶ್ವರ, ಶಿರೂರು, ಗೋಳಿಹೊಳೆ, ಪಡುವರಿ, ಚಿತ್ತೂರು, ಹಳ್ಳಿಹೊಳೆ, ಕೊಲ್ಲೂರು, ಮಡಾಮಕ್ಕಿ | ಇಂತಹ ಪ್ರದೇಶದಲ್ಲಿ ಶಾಲೆಗೆ ಹೋಗಿ ಬರುವ ಸಮಯದಲ್ಲಿ ನಾವೇ ಆಯ್ಕೆ ಸಮುದಾಯದ ತಂಡ ಮತ್ತು ಪೋಲಿಸ್ ಇಲಾಖೆಯವರು ಗಸ್ತು ತಿರುಗುತ್ತಾ ಗಮನಿಸಬೇಕು<br><br>ಮಕ್ಕಳಿಗೆ ಹದಿಹರೆಯದ ಶಿಕ್ಷಣ, ತರಬೇತಿ ಕೊಡಬೇಕು. | ಸಮುದಾಯದ ತಂಡ ಮತ್ತು ಪೋಲಿಸ್ ಇಲಾಖೆಯವರು ಗ್ರಾಮ ಪಂಚಾಯತ್ ನೇತೃತ್ವದಲ್ಲಿ<br><br>ಗ್ರಾಮ ಪಂಚಾಯತ್ ಶಾಲಾಭಿವೃದ್ಧಿ ಸಮಿತಿ, ಎಸ್.ಡಿ.ಎಂ.ಸಿ. |
| 10. | ಹೆದ್ದಾರಿ, ಪ್ರಮುಖ ರಸ್ತೆ ದಾಟುವಾಗ ವಾಹನಗಳು ವೇಗವಾಗಿ ಬರುತ್ತಿರುತ್ತವೆ. ಇದರಿಂದಾಗಿ ಮಕ್ಕಳಿಗೆ, | ಮಕ್ಕಳು ಮಹಿಳೆಯರು | **10 ಗ್ರಾಮ ಪಂಚಾಯತ್**<br>• ಕೋಟೇಶ್ವರ, ತೆಕ್ಕಟ್ಟೆ<br>• ಬೀಜಾಡಿ, ಆನಗಳ್ಳಿ<br>• ಹೆಮ್ಮಾಡಿ, ತಲ್ಲೂರು<br>• ಮರವಂತೆ, ತ್ರಾಸಿ | ಶಾಲೆಗೆ ಹೋಗುವಾಗ ಮತ್ತು ಶಾಲೆಯಿಂದ ಹಿಂತಿರುಗುವ ಸಮಯದಲ್ಲಿ ಸಂಚಾರಿ ಪೋಲೀಸ್ ವ್ಯವಸ್ಥೆ | ಸಂಚಾರಿ ಪೋಲಿಸ್ ಇಲಾಖೆ |

| ಕ್ರ.ಸಂ. | ಸಮಸ್ಯೆಗಳು | ಯಾರು ಎತ್ತಿದ್ದು | ಎಷ್ಟು ಪಂಚಾಯತ್ | ಸೂಚಿತ ಪರಿಹಾರಗಳು | ಯಾರು ಜವಾಬ್ದಾರರು |
|---|---|---|---|---|---|
| | ಹಿರಿಯರಿಗೆ ಹೆದ್ದಾರಿ ದಾಟುವುದೇ ಕಷ್ಟವಾಗುತ್ತದೆ. | | • ಕುಂಭಾಶಿ, ಮೊಳಹಳ್ಳಿ | | |
| 11. | ಶಾಲಾ-ಕಾಲೇಜುಗಳ ಶೌಚಾಲಯಗಳ ಗೋಡೆಗಳ ಮೇಲೆ ಅಶ್ಲೀಲ ಬರಹಗಳನ್ನು ಮಾಡುತ್ತಾರೆ. | ಮಕ್ಕಳು | **4 ಗ್ರಾಮ ಪಂಚಾಯತ್**<br>• ಬಸ್ರೂರು, ಕೋಟೇಶ್ವರ,<br>• ಹಂಗಳೂರು, ಕೋಣಿ | ಗ್ರಾಮ ಪಂಚಾಯತ್ ಸಹಕಾರದಲ್ಲಿ ಸಮುದಾಯದ ದೊಡ್ಡವರು, ಪೋಲಿಸ್ ಇಲಾಖೆಯವರು ಸೇರಿ ಜಂಟಿಯಾಗಿ ಒಂದು ತಂಡ ರಚಿಸಿ, ನಮ್ಮ ಪಂಚಾಯತ್ ವ್ಯಾಪ್ತಿಯಲ್ಲಿ ಶಾಲೆಗಳಲ್ಲಿ ಇಂತಹ ಗೋಡೆ ಬರಹಗಳು ಆಗದಂತೆ ಗಮನಹರಿಸಬೇಕು. | ಗ್ರಾಮ ಪಂಚಾಯತ್ ಸಹಕಾರದಲ್ಲಿ ರಚಿತವಾದ ಸಮುದಾಯದ ಕಾವಲು ಪಡೆ |
| | | | | ಮಕ್ಕಳಿಗೆ ಹದಿಹರೆಯದ ಶಿಕ್ಷಣ, ತರಬೇತಿ ಕೊಡಬೇಕು. | ಶಾಲಾಭಿವೃದ್ಧಿ ಸಮಿತಿ, ಎಸ್.ಡಿ.ಎಂ.ಸಿ. |
| 12. | ಅಂಗನವಾಡಿ, ಶಾಲಾ ಕಾಲೇಜುಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲ. | ಮಕ್ಕಳು | **40 ಗ್ರಾಮ ಪಂಚಾಯತ್** | ಶೌಚಾಲಯ ನಿರ್ಮಿಸಬೇಕು | |
| 13. | ಕೆಲವು ಶಾಲೆಗಳಲ್ಲಿರುವ ಸಲಹಾ ಪೆಟ್ಟಿಗೆಯಲ್ಲಿ ಮಕ್ಕಳು ಕೇವಲ ತರಗತಿಗಳಿಗೆ ಸಂಬಂಧಿಸಿದ ತೀರಾ ಸಾಮಾನ್ಯ ಸಮಸ್ಯೆಗಳು ಮಾತ್ರ ಬರೆದು ಹಾಕುತ್ತಾರೆ. ಉದಾ: ತರಗತಿಯ ಟ್ಯೂಬ್‌ಲೈಟ್ ಹಾಳಾಗಿದೆ, ಕಸ ತೆಗೆಯಲು ಪೊರಕೆ ಇಲ್ಲ ಇತ್ಯಾದಿ. ನಿಜವಾದ ಯಾವುದೇ ಸಮಸ್ಯೆಗಳನ್ನು ಬರೆದು ಹಾಕುವುದಿಲ್ಲ. ಕೆಲವು | ಮಕ್ಕಳು | **2 ಗ್ರಾಮ ಪಂಚಾಯತ್**<br>• ಕೋಟೇಶ್ವರ, ಹಂಗಳೂರು | ಮಕ್ಕಳಿಗೆ ಈ ಸಲಹಾ ಪೆಟ್ಟಿಗೆಯ ಬಳಕೆ, ಪ್ರಯೋಜನದ ಕುರಿತು ಜಾಗೃತಿ ಮೂಡಿಸಬೇಕು. ಅಲ್ಲದೇ ಈ ಸಲಹಾ ಪೆಟ್ಟಿಗೆಯನ್ನು ಮಕ್ಕಳಿಗೆ ಅನುಕೂಲವಾಗುವ ಜಾಗದಲ್ಲಿ, ಸುಲಭದಲ್ಲಿ ಸಿಗುವ ಜಾಗದಲ್ಲಿ ಇಡಬೇಕು | ಗ್ರಾಮ ಪಂಚಾಯತ್ ಶಾಲಾಭಿವೃದ್ಧಿ ಸಮಿತಿ, ಎಸ್.ಡಿ.ಎಂ.ಸಿ. |

| ಕ್ರ.ಸಂ. | ಸಮಸ್ಯೆಗಳು | ಯಾರು ಎತ್ತಿದ್ದು | ಎಷ್ಟು ಪಂಚಾಯತ್ | ಸೂಚಿತ ಪರಿಹಾರಗಳು | ಯಾರು ಜವಾಬ್ದಾರರು |
|---|---|---|---|---|---|
| | ಶಾಲೆಗಳಲ್ಲಿ ಒಂದು ರೂಪಾಯಿ ನಾಣ್ಯ, ಖಾಲಿಯಾದ ಪಾನ್ ಪರಾಗ್ ಪ್ಯಾಕೆಟ್, ಖಾಲಿಯಾದ ಲೇಸ್ ಪ್ಯಾಕೆಟ್ ಖಾಲಿ ಚೀಟಿಗಳನ್ನೇ ಹಾಕುತ್ತಾರೆ. | | | | |
| 14. | ಕತ್ತಲಿರುವ, ಜನ ಸಂಚರಿಸುವ ಪ್ರದೇಶಗಳಲ್ಲಿ ಬೀದಿ ದೀಪ ಇಲ್ಲ. ತಿರುಗಾಡುವಾಗ ಮಹಿಳೆಯರಿಗೆ ಮಕ್ಕಳಿಗೆ ಭಯವಾಗುತ್ತದೆ | ಮಕ್ಕಳು ಮಹಿಳೆಯರು | **21 ಗ್ರಾಮ ಪಂಚಾಯತ್** ಹಂಗಳೂರು, ಬಳ್ಕೂರು, ಬಸ್ರೂರು, ಬೀಜಾಡಿ, ಆನಗಳ್ಳಿ, ತೆಕ್ಕಟ್ಟೆ, ಕಾಲ್ತೋಡು, ಕಂಬದಕೋಣೆ, ನಾವುಂದ, ಆಲೂರು, ಗುಜ್ಜಾಡಿ, ಮರವಂತೆ, ತ್ರಾಸಿ, ಬೈಂದೂರು, ಶಿರೂರು, ಯಡ್ತರೆ, ಗೋಳಿಹೊಳೆ, ಹೇರೂರು, ಪಡುವರಿ, ಹಳ್ಳಿಹೊಳೆ, ಹಟ್ಟಿಯಂಗಡಿ | ಇಂತಹ ಪ್ರದೇಶಗಳಲ್ಲಿ ಬೀದಿ ದೀಪ ಅಳವಡಿಸಬೇಕು | ಗ್ರಾಮ ಪಂಚಾಯತ್ |
| 15. | ತೆರೆದ ಹೊಂಡ, ಕಲ್ಲು ಕೋರೆ, ಕೆರೆ, ಕೃಷಿ ಹೊಂಡ, ಕೊಜೆ ಹೊಂಡ, ಮದಗ, ತೆರೆದ ಕೊಳವೆ ಬಾವಿ ಇಂತಹ ಸ್ಥಳಗಳಲ್ಲಿ ಮಳೆಗಾಲದಲ್ಲಿ ನೀರು ತುಂಬಿ ದುರಂತಗಳು ಸಂಭವಿಸುತ್ತವೆ. | ಮಕ್ಕಳು ಮಹಿಳೆಯರು | **54 ಗ್ರಾಮ ಪಂಚಾಯತ್** | ಇಂತಹ ಅಪಾಯಕಾರಿ ವಲಯಗಳಿಗೆ ಅಗತ್ಯ ರಕ್ಷಣಾ ಕ್ರಮ ಕೈಗೊಳ್ಳಬೇಕು – ರಕ್ಷಣಾ ಬೇಲಿ, ಎಚ್ಚರಿಕಾ ಫಲಕಗಳು, ತಡೆಗೋಡೆ ಇತ್ಯಾದಿ | ಗ್ರಾಮ ಪಂಚಾಯತ್, ಸಮುದಾಯ, ಗಣಿ ಇಲಾಖೆ, ಜಲಾನಯನ ಇಲಾಖೆ |
| 16. | 3-4 ಕಿ.ಮೀ. ದೂರ ನಡೆದು ಹೋಗುವ ಪ್ರದೇಶಗಳಲ್ಲಿ ಶಾಲಾ ಮಕ್ಕಳಿಗೆ, ಕೆಲಸಕ್ಕೆ ಹೋಗುವ ಮಹಿಳೆಯರಿಗೆ ಅನೇಕ ಸಲ ಒಬ್ಬರೇ ಹೋಗಬೇಕಾಗುತ್ತದೆ. ಇಂತಹ ಸಮಯದಲ್ಲಿ ಭಯವಾಗುತ್ತದೆ. | ಮಕ್ಕಳು ಮಹಿಳೆಯರು | **46 ಗ್ರಾಮ ಪಂಚಾಯತ್** | ಶಾಲಾ ಸಮಯದಲ್ಲಿ ಮತ್ತು ಕೆಲಸಕ್ಕೆ ಹೋಗಿ ಬರುವ ಸಮಯದಲ್ಲಿ ಬಸ್ಸಿನ ವ್ಯವಸ್ಥೆ ಆಗಬೇಕು | ಪ್ರಾದೇಶಿಕ ಸಾರಿಗೆ ಇಲಾಖೆ ಮತ್ತು ಗ್ರಾಮ ಪಂಚಾಯತ್ ಜಂಟಿಯಾಗಿ |

| ಕ್ರ.ಸಂ. | ಸಮಸ್ಯೆಗಳು | ಯಾರು ಎತ್ತಿದ್ದು | ಎಷ್ಟು ಪಂಚಾಯತ್ | ಸೂಚಿತ ಪರಿಹಾರಗಳು | ಯಾರು ಜವಾಬ್ದಾರರು |
|---|---|---|---|---|---|
| 17. | ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಮನೆಯಲ್ಲಿ ದೌರ್ಜನ್ಯವಾದಾಗ, ಶೋಷಣೆಯಾದಾಗ ಇರಲು ವ್ಯವಸ್ಥೆ ಇಲ್ಲ. ಅಲ್ಲದೇ ಅನಾಥ ವೃದ್ಧರಿಗೆ ಉಳಿದುಕೊಳ್ಳಲು ವ್ಯವಸ್ಥೆ ಇಲ್ಲ. | ಮಹಿಳೆಯರು | **35 ಗ್ರಾಮ ಪಂಚಾಯತ್** | ಪಂಚಾಯತ್ ಮಟ್ಟದಲ್ಲಿ ತಕ್ಷಣದಲ್ಲಿ ಸ್ಪಂದಿಸುವಂತಹ ವ್ಯವಸ್ಥೆ ಇರುವ ರಕ್ಷಣಾ ವಸತಿ ಗೃಹಗಳು ಬೇಕು | ಗ್ರಾಮ ಪಂಚಾಯತ್ ಮತ್ತು ಜಿಲ್ಲಾಡಳಿತ ಸೇರಿ |
| 18. | ಶಾಲಾ ವಠಾರಗಳಲ್ಲಿ, ತಿರುವುಗಳಲ್ಲಿ, ಕಿರು ಸೇತುವೆ ಇರುವ ಕಡೆಗಳಲ್ಲಿ ವಾಹನಗಳು ಅತಿ ವೇಗದಿಂದ ಹೋಗುತ್ತವೆ, | ಮಕ್ಕಳು ಮಹಿಳೆಯರು | **12 ಗ್ರಾಮ ಪಂಚಾಯತ್**<br>• ಕೋಣಿ, ಬೀಜಾಡಿ,<br>• ಕೋಟೇಶ್ವರ, ತೆಕ್ಕಟ್ಟೆ,<br>• ಚಿತ್ತೂರು, ಕೊಲ್ಲೂರು, ಜಡ್ಕಲ್, ಹೆಮ್ಮಾಡಿ, ಮೊಳಹಳ್ಳಿ, ಬೀಜಾಡಿ, ತಲ್ಲೂರು, | ವಾಹನಗಳು ಅತಿವೇಗದಿಂದ ಹೋಗದಂತೆ ಸೂಚನಾ / ಎಚ್ಚರಿಕಾ ಫಲಕಗಳನ್ನು ಹಾಕಬೇಕು. ಹಾಗೂ ಕೆಲವೆಡೆ ವೇಗ ತಡೆಗಳನ್ನು ಮಾಡಬೇಕು | ಸಂಚಾರಿ ಪೋಲಿಸ್ ಇಲಾಖೆ ಗ್ರಾಮ ಪಂಚಾಯತ್ |
| 19. | ಬಸ್ ನಿಲ್ದಾಣಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲ | ಮಕ್ಕಳು ಮಹಿಳೆಯರು | **4 ಗ್ರಾಮ ಪಂಚಾಯತ್**<br>ಚಿತ್ತೂರು, ಕೊಲ್ಲೂರು, ತೆಕ್ಕಟ್ಟೆ, ಜಡ್ಕಲ್ | ಶೌಚಾಲಯ ಬೇಕು | ಗ್ರಾಮ ಪಂಚಾಯತ್ |
| 20. | ಮಕ್ಕಳು ಮೊಬೈಲ್, ಅಂತರ್ಜಾಲ ಮುಂತಾದ ತಂತ್ರಜ್ಞಾನದ ತಪ್ಪು ಬಳಕೆಗಳಿಂದಾಗಿ ಹಾಳಾಗುತ್ತಿದ್ದಾರೆ. | ಮಹಿಳೆಯರು | **25 ಗ್ರಾಮ ಪಂಚಾಯತ್‌ಗಳಲ್ಲಿ** | ಮಕ್ಕಳಿಗೆ ಮೊಬೈಲ್, ಅಂತರ್ಜಾಲ ಮುಂತಾದ ತಂತ್ರಜ್ಞಾನದ ಕೆಟ್ಟ ಬಳಕೆಗಳಿಂದಾದ ಅನಾಹುತಗಳ ಕುರಿತಾಗಿ ಜಾಗೃತಿ ಮೂಡಿಸಲು ಎಲ್ಲಾ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಮಾಹಿತಿ ಕಾರ್ಯಕ್ರಮ ನಡೆಸಬೇಕು. | ಗ್ರಾಮ ಪಂಚಾಯತ್, ಶಾಲಾ ಕಾಲೇಜುಗಳ ಆಡಳಿತ ಸಮಿತಿ, ಎಸ್.ಡಿ.ಎಂ.ಸಿ. |
| 21. | ಮಹಿಳೆಯರಿಗೆ, ಮಕ್ಕಳಿಗೆ ಇರುವ ಕೆಲವು ಗೌಪ್ಯವಾದ, ವೈಯಕ್ತಿಕ, ಎಲ್ಲರೊಂದಿಗೆ ಹೇಳಿಕೊಳ್ಳಲಾರದಂತಹ ಸಮಸ್ಯೆಗಳನ್ನು | ಮಹಿಳೆಯರು ಮಕ್ಕಳು | **ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ** | ಅಂಚೆ ಪೆಟ್ಟಿಗೆ ವ್ಯವಸ್ಥೆ ಬೇಕು. ಇದನ್ನು ಮಕ್ಕಳು / ಮಹಿಳೆಯರೇ ಆಯ್ಕೆ ಮಾಡಿದ ಮಕ್ಕಳ ಮಿತ್ರ / ಮಹಿಳಾ ಮಿತ್ರರೇ | ಗ್ರಾಮ ಪಂಚಾಯತ್ |

| ಕ್ರ.ಸಂ. | ಸಮಸ್ಯೆಗಳು | ಯಾರು ಎತ್ತಿದ್ದು | ಎಷ್ಟು ಪಂಚಾಯತ್ | ಸೂಚಿತ ಪರಿಹಾರಗಳು | ಯಾರು ಜವಾಬ್ದಾರರು |
|---|---|---|---|---|---|
| | ಹೇಳಿಕೊಳ್ಳಲು ಸೂಕ್ತ ವ್ಯವಸ್ಥೆ ಬೇಕು | | | ತೆರೆದು ನೋಡಬೇಕು. | |
| 22. | ಮಕ್ಕಳಿಗೆ ಮತ್ತು ಮಹಿಳೆಯರಿಗೆ ಸಮಸ್ಯೆ ಉಂಟಾದಾಗ ತಕ್ಷಣದಲ್ಲಿ ಸ್ಪಂದಿಸಲು ಮತ್ತು ಕ್ರಮ ಕೈಗೊಳ್ಳುವಲ್ಲಿ ನೆರವಾಗಲು ಮಕ್ಕಳಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾದ ಉಚಿತ ಕರೆಯ ಸೌಲಭ್ಯವಿರುವ ಸಹಾಯವಾಣಿ ವ್ಯವಸ್ಥೆ ಬೇಕು. | ಮಕ್ಕಳು ಮಹಿಳೆಯರು | ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ | ಸಹಾಯವಾಣಿ ವ್ಯವಸ್ಥೆ ಬೇಕು. ಈ ಸಹಾಯವಾಣಿಯ ಸಂಖ್ಯೆಯನ್ನು ನಮ್ಮ ಪಂಚಾಯತ್‌ನ ಪ್ರಮುಖ ಪ್ರದೇಶಗಳಲ್ಲಿ, ಶಾಲೆಗಳಲ್ಲಿ, ಬಸ್‌ಗಳಲ್ಲಿ, ಪಂಚಾಯತ್ ಎದುರು ಹೀಗೆ ವ್ಯಾಪಕವಾಗಿ ಪ್ರಚಾರ ಮಾಡಬೇಕು. ಅಲ್ಲದೇ ಎಲ್ಲಾ ಬಸ್‌ಗಳಲ್ಲಿ ಆಯಾ ಬಸ್ ಮಾಲಿಕರ ದೂರವಾಣಿ ಸಂಖ್ಯೆ ಕಡ್ಡಾಯವಾಗಿ ಹಾಕಬೇಕು | ಪೋಲಿಸ್ ಇಲಾಖೆ ಗ್ರಾಮ ಪಂಚಾಯತ್ |
| 23. | ಮಕ್ಕಳ ಸಮಸ್ಯೆಗಳನ್ನು, ಮಹಿಳೆಯರ ಸಮಸ್ಯೆಗಳನ್ನು ಕೇಳಿಸಿಕೊಳ್ಳಲು ಮತ್ತು ಅವುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ನೆರವಾಗಲು ಮಕ್ಕಳೇ/ಮಹಿಳೆಯರೇ ಆಯ್ಕೆ ಮಾಡಿದ ಮಕ್ಕಳ ಮಿತ್ರ ವ್ಯವಸ್ಥೆ ಬೇಕು. ಈ ಮಕ್ಕಳ ಮಿತ್ರರಿಗೆ ಗ್ರಾಮ ಪಂಚಾಯತ್ ಮನ್ನಣೆ ನೀಡಬೇಕು | ಮಕ್ಕಳು ಮಹಿಳೆಯರು | ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ | ಮಕ್ಕಳ ಮಿತ್ರ/ ಮಹಿಳಾ ಮಿತ್ರ ಆಯ್ಕೆ | ಗ್ರಾಮ ಪಂಚಾಯತ್ ಸಮುದಾಯ |
| 24. | ಮಕ್ಕಳ ಮತ್ತು ಮಹಿಳೆಯರ ರಕ್ಷಣೆಗೆ ಸ್ಪಂದಿಸಲು, ಮತ್ತು ಅಗತ್ಯ ಕ್ರಮ ಕೈಗೊಳ್ಳುವಲ್ಲಿ | ಮಕ್ಕಳು ಮಹಿಳೆಯರು | ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ | ಗ್ರಾಮ ಜಾರಿ ಪಡೆ ರಚನೆ ಆಗಬೇಕು. | ಗ್ರಾಮ ಪಂಚಾಯತ್ ಸಮುದಾಯ |

| ಕ್ರ.ಸಂ. | ಸಮಸ್ಯೆಗಳು | ಯಾರು ಎತ್ತಿದ್ದು | ಎಷ್ಟು ಪಂಚಾಯತ್ | ಸೂಚಿತ ಪರಿಹಾರಗಳು | ಯಾರು ಜವಾಬ್ದಾರರು |
|---|---|---|---|---|---|
| | ತಕ್ಷಣದಲ್ಲಿ ನೆರವಾಗಲು ಮಕ್ಕಳು ಮತ್ತು ಮಹಿಳೆಯರೇ ಆಯ್ಕೆ ಮಾಡಿದ ಗ್ರಾಮ ಜಾರಿ ಪಡೆ ರಚನೆ ಆಗಬೇಕು. | | | | |
| 25. | ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಹಿಳೆಯರು ಎತ್ತಿದ ಸಮಸ್ಯೆಗಳನ್ನು ನಿಯಮಿತ ಕಾಲಕ್ಕೆ ಸರಿಯಾಗಿ ಚರ್ಚಿಸಿ, ಆ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಲ್ಲಿ ಸಮಸ್ಯೆಗಳ ಸತ್ಯಾಸತ್ಯತೆಗಳನ್ನು ಪರೀಕ್ಷಿಸಲು ಅಗತ್ಯವಾದಂತಹ ಯಾವುದೇ ಅನುಸರಣಾ ವ್ಯವಸ್ಥೆ ಇಲ್ಲ. | ಮಹಿಳೆಯರು | **19 ಗ್ರಾಮ ಪಂಚಾಯತ್** ಆಜ್ರಿ, ಶಂಕರನಾರಾಯಣ, ಹೊಸಂಗಡಿ, ಬೀಜಾಡಿ, ಆನಗಳ್ಳಿ, ತೆಕ್ಕಟ್ಟೆ, ಬೇಳೂರು, ಕಾಳಾವರ, ಹೊಂಬಾಡಿ ಮಂಡಾಡಿ, ಕುಂಭಾಶಿ, ಮೊಳಹಳ್ಳಿ, ಕೆದೂರು, ಕರ್ಕುಂಜೆ, ಕಾವ್ರಾಡಿ, ಸಿದ್ಧಾಪುರ, ಕಾಲ್ತೋಡು, ಹಾಲಾಡಿ, ಹಾರ್ದಳ್ಳಿ ಮಂಡಳ್ಳಿ, ಮಡಾಮಕ್ಕಿ | ಮಕ್ಕಳ ಮಹಿಳೆಯರ ಬಗ್ಗೆ ಶೋಷಣೆಯಾದಾಗ ಅಥವಾ ಅಪಾಯವುಂಟಾದಾಗ, ಸಮಸ್ಯೆ ಉಂಟಾದಾಗ ಇದಕ್ಕೆ ಸಂಬಂಧಪಟ್ಟಂತೆ ಗ್ರಾಮ ಮಟ್ಟದ ಜಾರಿ ಪಡೆ ಮತ್ತು ಅಗತ್ಯವಿದ್ದರೆ ತಾಲೂಕು ಮಟ್ಟದ ಜಾರಿಪಡೆಯು ಸೂಕ್ತ ಮೇಲ್ವಿಚಾರಣಾ (ಸತ್ಯ ಶೋಧನಾ) ಸಮಿತಿ ರಚಿಸಬೇಕು. | ಗ್ರಾಮ ಪಂಚಾಯತ್ ಮಟ್ಟದ ಸಮಿತಿ ಸದಸ್ಯರು |
| 26. | ರಸ್ತೆಯ ಪಕ್ಕದಲ್ಲಿರುವ ಮುಳ್ಳಿನ ಪೊದೆಗಳಿರುವುದರಿಂದ ಭಯವಾಗುತ್ತದೆ. ಕಡಿಯಬೇಕು. | ಮಕ್ಕಳು | **5 ಗ್ರಾಮ ಪಂಚಾಯತ್** ಉಪ್ಪುಂದ, ಖಂಬದಕೋಣೆ, ಮರವಂತೆ, ಶಿರೂರು, ಹಳ್ಳಿಹೊಳೆ | ರಸ್ತೆಯ ಪಕ್ಕದಲ್ಲಿರುವ ಮುಳ್ಳಿನ ಪೊದೆಗಳನ್ನು ಕಡಿಯಬೇಕು. | ಗ್ರಾಮ ಪಂಚಾಯತ್ |
| 27. | ಗ್ರಾಮ ಮಟ್ಟದಲ್ಲಿರುವ ಸಾಮಾಜಿಕ ನ್ಯಾಯ ಸಮಿತಿ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ | ಮಹಿಳೆಯರು | **2 ಗ್ರಾಮ ಪಂಚಾಯತ್** ಕಾಳಾವರ, ಮೊಳಹಳ್ಳಿ, | ಗ್ರಾಮಮಟ್ಟದಲ್ಲಿರುವ ಸಾಮಾಜಿಕ ನ್ಯಾಯ ಸಮಿತಿಗಳು ಗಟ್ಟಿಯಾಗಬೇಕು | ಗ್ರಾಮ ಪಂಚಾಯತ್ |
| 28. | ಕೆಲವು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು ಮಕ್ಕಲು, ಮಹಿಳೆಯರು ಮತ್ತು ಎಲ್ಲರಿಗೂ ಇದರಿಂದ ತೊಂದರೆಯಾಗುತ್ತದೆ. | ಮಕ್ಕಳು | **6 ಗ್ರಾಮ ಪಂಚಾಯತ್** ಹೆಮ್ಮಾಡಿ. ಬೀಜಾಡಿ, ಕೋಣಿ, ಹಟ್ಟಿಯಂಗಡಿ, ಗುಜ್ಜಾಡಿ, ಕೊಲ್ಲೂರು | ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. | ಗ್ರಾಮ ಪಂಚಾಯತ್. |

| ಕ್ರ.ಸಂ. | ಸಮಸ್ಯೆಗಳು | ಯಾರು ಎತ್ತಿದ್ದು | ಎಷ್ಟು ಪಂಚಾಯತ್ | ಸೂಚಿತ ಪರಿಹಾರಗಳು | ಯಾರು ಜವಾಬ್ದಾರರು |
|---|---|---|---|---|---|
| 29. | ತೆರೆದ ಚರಂಡಿ ಹಾಗೂ ಕೆಲವು ಕಡೆ ಸರಿಯಾದ ಚರಂಡಿಗಳಿಲ್ಲದೇ ಇರುವುದರಿಂದ ಮಳೆಗಾಲದಲ್ಲಿ ನೀರು ತುಂಬಿ ಹರಿಯುತ್ತದೆ. ಸೈಕಲ್‌ನಲ್ಲಿ ತಿರುಗಾಡುವವರು ಮತ್ತು ನಡೆದಾಡುವವರಿಗೆ ತುಂಬಾ ಅಪಾಯಕಾರಿಯಾಗಿದೆ. | ಮಹಿಳೆಯರು | **5 ಗ್ರಾಮ ಪಂಚಾಯತ್** ಹಂಗಳೂರು, ಉಪ್ಪುಂದ, ಆಲೂರು, ಗುಜ್ಜಾಡಿ, ಕೋಣಿ | ಈ ತೆರೆದ ಚರಂಡಿ ಮುಚ್ಚುವಂತೆ ಚಪ್ಪಡಿ ಹಾಕಬೇಕು. | ಗ್ರಾಮ ಪಂಚಾಯತ್. |
| 30. | ದೃಶ್ಯ ಮಾಧ್ಯಮಗಳಲ್ಲಿ ಬಿತ್ತರವಾಗುವ ಅಶ್ಲೀಲ ಮತ್ತು ಅತಿ ರಂಜಿತ ಕಾರ್ಯಕ್ರಮಗಳು ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತವೆ. | ಮಹಿಳೆಯರು | **4 ಗ್ರಾಮ ಪಂಚಾಯತ್** ಮೊಳಹಳ್ಳಿ, ಕಾಲ್ತೋಡು, ಗೋಳಿಹೊಳೆ, ವಂಡ್ಸೆ | ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗುವ ಎಲ್ಲಾ ಕಾರ್ಯಕ್ರಮಗಳನ್ನು ಪರಿಶೀಲಿಸಿ, ಮಕ್ಕಳಿಗೆ ಮತ್ತು ಮಹಿಳೆಯರಿಗೆ ಮುಜುಗರ ಉಂಟು ಮಾಡದ ಹಾಗೂ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರದಂತಹ ಕಾರ್ಯಕ್ರಮಗಳನ್ನು ಮಾತ್ರ ಪ್ರಸಾರ ಮಾಡುವಂತಾಗಬೇಕು. ದೃಶ್ಯ ಮಾಧ್ಯಮಗಳ ಮೇಲೆ ಸೂಕ್ತ ನಿಯಂತ್ರಣವಿರಬೇಕು. | ರಾಜ್ಯ ಸರ್ಕಾರ ಮತ್ತು ಸೆನ್ಸಾರ್ ಮಂಡಳಿ, ಟಿ.ವಿ.ಚಾನಲ್ |
| 31. | ಶಾಲಾ–ಕಾಲೇಜುಗಳಲ್ಲಿ ಸ್ಯಾನಿಟರಿ ಪ್ಯಾಡ್‌ಗಳ ವಿತರಣೆ. | ಮಹಿಳೆಯರು | **2 ಗ್ರಾಮ ಪಂಚಾಯತ್** ಹಾಲಾಡಿ, ಸಿದ್ಧಾಪುರ | ಶಾಲಾ–ಕಾಲೇಜುಗಳಲ್ಲಿ ವಿತ ರಿಸುವ ಸ್ಯಾನಿಟರಿ ಪ್ಯಾಡ್‌ಗಳ ಬಗ್ಗೆ ಹೆಣ್ಣುಮಕ್ಕಳಿಗೆ ಸೂಕ್ತ ಮಾಹಿತಿ ನೀಡಬೇಕು. ಅಲ್ಲದೇ ಈ ಸಮಯದಲ್ಲಿ ಹುಡುಗರು ಚುಡಾಯಿಸುವುದನ್ನು ತಡೆಯಲು ಅವರಿಗೂ ಕೂಡ ಇದರ ಅವಶ್ಯಕತೆ, | ಶಿಕ್ಷಣ ಇಲಾಖೆಯವರು ಶಾಲಾಭಿವೃದ್ಧಿ ಸಮಿತಿ, ಎಸ್.ಡಿ.ಎಂ.ಸಿ. |

| ಕ್ರ.ಸಂ. | ಸಮಸ್ಯೆಗಳು | ಯಾರು ಎತ್ತಿದ್ದು | ಎಷ್ಟು ಪಂಚಾಯತ್ | ಸೂಚಿತ ಪರಿಹಾರಗಳು | ಯಾರು ಜವಾಬ್ದಾರರು |
|---|---|---|---|---|---|
| | | | | ಉಪಯೋಗದ ಬಗ್ಗೆ ತಿಳುವಳಿಕೆ ನೀಡಬೇಕು. | |
| 32. | ಹೆಚ್.ಐ.ವಿ. ಪೀಡಿತ ಮಕ್ಕಳು ಶಾಲೆಗೆ ಹೋದಾಗ ಅಲ್ಲಿ ಶಿಕ್ಷಕರು ಮತ್ತು ಮಕ್ಕಳು ಅವರೊಂದಿಗೆ ಬೆರೆಯುವುದಿಲ್ಲ. ಹೆಚ್.ಐ.ವಿ. ಪೀಡಿತ ಮಹಿಳೆಯರು ಯಾವುದೇ ಸಭೆ–ಸಮಾರಂಭಗಳಿಂದ ಅವರನ್ನು ದೂರವಿಡುತ್ತಾರೆ. | ಮಹಿಳೆಯರು | ನಾಡಾ | ಹೆಚ್.ಐ.ವಿ. ಕುರಿತಾಗಿ ಸೂಕ್ತವಾದ ಮಾಹಿತಿ ಕಾರ್ಯಕ್ರಮ ನಡೆಸಬೇಕು. ಜನರಲ್ಲಿ ಈ ಕುರಿತು ಅರಿವು ಮೂಡಿಸಬೇಕು. ಹೆಚ್.ಐ.ವಿ. ಪೀಡಿತರಿಗೆ ಸಮಸ್ಯೆಯನ್ನು ಎದುರಿಸುವ ಶಕ್ತಿ, ಧೈರ್ಯ ತುಂಬಬೇಕು; ಸಮಾಜದಲ್ಲಿ ಎಲ್ಲರಂತೆ ಬದುಕುವ ಹಕ್ಕು ನೀಡಬೇಕು. | ಗ್ರಾಮ ಪಂಚಾಯತ್, ಸಮುದಾಯ, ಸ್ಥಳೀಯ ಜನಪ್ರತಿನಿಧಿಗಳು, ಸ್ಥಳೀಯ ಸಂಸ್ಥೆಗಳು, ಮಾಧ್ಯಮಗಳು |
| 33. | ಮಹಿಳೆಯರ ಪ್ರತ್ಯೇಕ ಸಮಸ್ಯೆಗಳನ್ನು ಹೇಳಿಕೊಳ್ಳಲು ಯಾವುದೇ ವೇದಿಕೆ ಇಲ್ಲ | ಮಹಿಳೆಯರು | **10 ಗ್ರಾಮ ಪಂಚಾಯತ್** ನಾಡಾ, ಬೇಳೂರು, ಅಂಪಾರು, ಬಳ್ಕೂರು, ಬಸ್ರೂರು, ಕರ್ಕುಂಜೆ, ಕಾವ್ರಾಡಿ, ಹೊಂಬಾಡಿ ಮಂಡಾಡಿ, ಕಾಳಾವರ, ಹಾಲಾಡಿ | ಪ್ರತಿ ವರ್ಷ ಗ್ರಾಮ ಪಂಚಾಯತ್‌ನಲ್ಲಿ ಮಹಿಳಾ ಗ್ರಾಮ ಸಭೆ ತಪ್ಪದೇ ನಡೆಸಬೇಕು. ಮಹಿಳೆಯರ ಗ್ರಾಮಸಭೆಗೆ ಮತ್ತು ಅಲ್ಲಿ ಎತ್ತಿದ ಸಮಸ್ಯೆಗಳ ಪರಿಹಾರಕ್ಕೆ ಪ್ರತ್ಯೇಕ ಅನುದಾನ ಮೀಸಲಿಡಬೇಕು. | ರಾಜ್ಯ ಸರ್ಕಾರ ಮತ್ತು ಗ್ರಾಮ ಪಂಚಾಯತ್ ಜೊತೆಗೂಡಿ |

## ಮಕ್ಕಳ ಮಿತ್ರ ಮತ್ತು ಮಹಿಳಾ ಮಿತ್ರ – ಒಂದು ಮಾರ್ಗದರ್ಶಿ

### *ಮಕ್ಕಳ ಮಿತ್ರ*

***ಮಕ್ಕಳ ಮಿತ್ರ ಯಾಕೆ:***

ಯಾವುದೇ ಒಂದು ಮಗು ಅದರಲ್ಲೂ ಹೆಣ್ಣು ಮಗು ಸಮಾಜದಿಂದ, ಕೆಲವು ವ್ಯಕ್ತಿಗಳಿಂದ, ಕುಟುಂಬದ ಸದಸ್ಯರಿಂದ, ಪೋಷಕರಿಂದ ತಂದೆ/ ತಾಯಿಯಿಂದ ಹಾಗೂ ಇತರೆ ವ್ಯಕ್ತಿಗಳಿಂದ ದೈಹಿಕವಾಗಿ, ಮಾನಸಿಕವಾಗಿ, ಲೈಂಗಿಕವಾಗಿ ನೋವು, ಹೊಡೆತ, ಕಿರುಕುಳಗಳನ್ನು ಅನುಭವಿಸುತ್ತಿದ್ದು ಅಂತಹ ವಿಷಯಗಳನ್ನು ಸ್ನೇಹಿತರ ಜೊತೆಯಾಗಲೀ, ಕುಟುಂಬದ ಸದಸ್ಯರೊಂದಿಗಾಗಲೀ, ತಂದೆ/ತಾಯಿ, ಪೋಷಕರೊಂದಿಗಾಗಲೀ ಹೇಳಿಕೊಳ್ಳಲು ಸಾಧ್ಯವಾಗದೆ ಇರುವ ಸಂದರ್ಭದಲ್ಲಿ; ಒಂದೊಮ್ಮೆ ಹೇಳಿಕೊಂಡರೂ ಅವರನ್ನು ಅನುಮಾನದಿಂದ ನೋಡುವ ಸಂದರ್ಭಗಳು ಬಂದಾಗ; ಹೇಳಿಕೊಳ್ಳಲು ಆಗದೆ, ಹೇಳದೇ ಇರಲು ಆಗದೆ, ಭಯ-ಒತ್ತಡ-ಬೆದರಿಕೆಗಳೊಂದಿಗೆ ಬದುಕುವ ಸನ್ನಿವೇಶ ಬಂದಾಗ ಸಹಜವಾಗಿ ಮಕ್ಕಳು ಮಾನಸಿಕ ಒತ್ತಡಕ್ಕೆ ಒಳಗಾಗಿ ಅಪಾಯ ತಂದುಕೊಳ್ಳುವ ಪರಿಸ್ಥಿತಿ ಎದುರಾಗುತ್ತದೆ. ಇಂತಹ ಪರಿಸ್ಥಿತಿಯಿಂದ ಹೊರಬರಲು, ತಮ್ಮ ಮೇಲೆ ಆಗುವ ದೌರ್ಜನ್ಯವನ್ನು ತಮಗೆ ಆಪ್ತರೆನಿಸಿಕೊಂಡಿರುವ ಒಬ್ಬ ವ್ಯಕ್ತಿಯೊಡನೆ ಹೇಳಿಕೊಳ್ಳುವ ಅವಕಾಶ ಕಲ್ಪಿಸಿಕೊಡುವುದಕ್ಕೆ **ಇರುವುದು 'ಮಕ್ಕಳ ಮಿತ್ರ'** ವ್ಯವಸ್ಥೆ.

***ಮಕ್ಕಳ ಮಿತ್ರರಾಗಿ ಯಾರನ್ನು ಆಯ್ಕೆಮಾಡಬಹುದು ಎಂಬುದಕ್ಕೆ ಪ್ರಸ್ತುತ ಆಲೋಚನೆಗಳು:***

- ಪ್ರತಿ ಪಂಚಾಯತ್‌ನಲ್ಲಿ ಮಕ್ಕಳು ತಾವು ನಿರ್ಧರಿಸಿದ ಅಳತೆಗೋಲನ್ನು ಇಟ್ಟುಕೊಂಡು ಆಯ್ಕೆಮಾಡಿದ ವಯಸ್ಕ ಗಂಡಸರು/ಮಹಿಳೆಯರು.
- ಮಕ್ಕಳು ವಾಸಿಸುತ್ತಿರುವ ಆಸುಪಾಸಿನ ಪ್ರದೇಶದಲ್ಲಿ ಮಕ್ಕಳಿಗೆ ಯೋಗ್ಯರೆನಿಸಿರುವ, ನಂಬಿಕೆ ಇರುವ, ಮಕ್ಕಳ ಬಗ್ಗೆ ಗೌರವ, ಕಾಳಜಿ ಇರುವ, ಸ್ವತಃ ಯಾವುದೇ ರೀತಿಯ ದುರ್ನಡತೆ ಇಲ್ಲದೆ ಇರುವ, ಸಮುದಾಯದಲ್ಲಿರುವ, ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿರುವ 18 ವರ್ಷ ಮೇಲ್ಪಟ್ಟ ಮಹಿಳೆ ಅಥವಾ ಪುರುಷ.
- ಆಯಾ ಗ್ರಾಮ ಪಂಚಾಯತ್‌ನ ಸ್ಥಳೀಯ ಭೌಗೋಳಿಕ, ಸಾಂಸ್ಕೃತಿಕ, ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ಮಕ್ಕಳು ತಮ್ಮ ಅನುಕೂಲಕ್ಕೆ ಅಗತ್ಯವೆನಿಸಿದಷ್ಟು ಮಕ್ಕಳ ಮಿತ್ರರನ್ನು ಆಯ್ಕೆ ಮಾಡಬಹುದು.
  ಉದಾ:- ಪ್ರದೇಶ ಅಥವಾ ಹಳ್ಳಿಯ ನೆಲೆಯಲ್ಲಿ

***ಈ ಮಕ್ಕಳ ಮಿತ್ರರನ್ನು ಯಾರು ಆಯ್ಕೆ ಮಾಡಬೇಕು:***

- ಆಯಾ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಭೌಗೋಳಿಕ ಪ್ರದೇಶ, ಪರಿಸ್ಥಿತಿಯ ಆಧರಿಸಿ ಅಲ್ಲಿನ ಮಕ್ಕಳು ತಮಗೆ ಸೂಕ್ತವೆನ್ನಿಸುವ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳಬಹುದು.
- ಕನಿಷ್ಟ ಎರಡು ವ್ಯಕ್ತಿಗಳನ್ನು ಆಯ್ಕೆ ಮಾಡಿದ್ದಲ್ಲಿ ಒಬ್ಬರು ಮಹಿಳೆ ಆಗಿರಬೇಕು-ಒಬ್ಬರೇ ಇದ್ದಾಗ ಮಹಿಳೆಯರಿಗೇ ಆದ್ಯತೆ.

***ಮಕ್ಕಳ ಮಿತ್ರರನ್ನು ಯಾರು ಗುರುತಿಸಿ ಮಾನ್ಯತೆ ನೀಡಬೇಕು:***

ಆಯಾ ಪಂಚಾಯತ್ ವ್ಯಾಪ್ತಿಯಲ್ಲಿ ಮಕ್ಕಳೇ ತಯಾರಿಸಿದ ಮಾನದಂಡ ಅರ್ಹತೆಯ ಆಧಾರದಲ್ಲಿ ಗುರುತಿಸಿದ ಮಕ್ಕಳ ಮಿತ್ರರನ್ನು ಗ್ರಾಮ ಪಂಚಾಯತ್ ಗುರುತಿಸಿ, ಗೌರವಿಸಬೇಕು ಹಾಗೂ ಅವರಿಗೆ ಮಾನ್ಯತೆ ನೀಡಬೇಕು.

*ಮಕ್ಕಳ ಮಿತ್ರರ ಅವಧಿ*

- ಆಯ್ಕೆಯಾದ ಮಕ್ಕಳ ಮಿತ್ರರ ಅವಧಿ ಕನಿಷ್ಟ 2 ವರ್ಷ
- ಅಗತ್ಯವೆನಿಸಿದರೆ ಮಕ್ಕಳ ಮಿತ್ರರನ್ನು ಮಧ್ಯಂತರದಲ್ಲಿಯೇ ಬದಲಾಯಿಸಬಹುದು.
- ಒಂದೊಮ್ಮೆ ಅವರು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂದು ಅವರಿಗೆ ಅನ್ನಿಸಿದರೆ ಅವರೇ ನಿವೃತ್ತಿ ಹೊಂದಬಹುದು.
- ಹೀಗೆ ನಿವೃತ್ತಿ ಹೊಂದಿದ ಮಕ್ಕಳ ಮಿತ್ರರು ಹೊಸದಾಗಿ ಆಯ್ಕೆಯಾಗುವ ಮಕ್ಕಳ ಮಿತ್ರರಿಗೆ ತಮ್ಮ ಅವಧಿಯಲ್ಲಿ ನಿರ್ವಹಿಸಿರುವ ಕೆಲಸದ ಅನುಭವವನ್ನು ಹಂಚಿಕೊಳ್ಳಬಹುದು. ಅಗತ್ಯ ಬಿದ್ದರೆ ಹೊಸ ಮಕ್ಕಳ ಮಿತ್ರರಿಗೆ ಸಲಹೆಗಳನ್ನು ನೀಡಬಹುದು.

*ಮಕ್ಕಳ ಮಿತ್ರ ಜವಾಬ್ದಾರಿಗಳು*

- ಮಕ್ಕಳಿಂದ ಆಯ್ಕೆಯಾದ ಮಕ್ಕಳ ಮಿತ್ರರು ಮಕ್ಕಳ ಪಂಚಾಯತ್ ಹಾಗೂ ಮಕ್ಕಳಿಗೆ ಜವಾಬ್ದಾರಿಯಾಗಿರಬೇಕು.
- ಯಾವುದೇ ಪರಿಸ್ಥಿತಿಯಲ್ಲಿ ಮಕ್ಕಳ ರಕ್ಷಣೆ ಅವರ ಮೊದಲ ಆದ್ಯತೆ ಆಗಿರಬೇಕು.
- ಮಕ್ಕಳಿಗೆ ಸದಾ ಯಾವುದೇ ಸಮಯದಲ್ಲಾದರೂ ಲಭ್ಯವಿರುವಂತರಾಗಿರಬೇಕು..
- ಮಕ್ಕಳ ಮಿತ್ರರು ತಮ್ಮ ಹೆಸರು, ಸಂಪರ್ಕ ವಿಳಾಸ ಹಾಗೂ ದೂರವಾಣಿ ಸಂಖ್ಯೆಯನ್ನು ಅವರ ಪ್ರದೇಶದ ಎಲ್ಲಾ ಮಕ್ಕಳಿಗೆ ಸಿಗುವ ಹಾಗೆ ಪ್ರಚಾರ ಹಾಗೂ ಪೋಸ್ಟರ್ ಮೂಲಕ ಪ್ರದರ್ಶಿಸಬೇಕು.

*ಆಯ್ಕೆಯಾದ ಮಕ್ಕಳ ಮಿತ್ರರು ಕೆಲಸ ನಿರ್ವಹಿಸದೇ ಇದ್ದರೆ,*

- ಮಕ್ಕಳಿಗೆ ಆಯ್ಕೆಯಾದ ಮಕ್ಕಳ ಮಿತ್ರರು ಸಮರ್ಪಕವಾಗಿ ಕೆಲಸ ನಿರ್ವಹಿಸದೇ ಇದ್ದಲ್ಲಿ, ಮಕ್ಕಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ಎನ್ನಿಸಿದರೆ, ಅವರು ಪಕ್ಷಪಾತ ಮಾಡುತ್ತಾರೆ ಎನ್ನಿಸಿದರೆ, ಮಕ್ಕಳು ತಮ್ಮಲ್ಲಿ ಚರ್ಚಿಸಿ ಅವರನ್ನು ಹಿಂದಕ್ಕೆ ಕರೆಸಿಕೊಳ್ಳುವ ಅಧಿಕಾರ ಇದೆ.
- ಈ ಹಿಂದಕ್ಕೆ ಕರೆಸಿಕೊಳ್ಳುವವರ ವಿವರವನ್ನು ಗ್ರಾಮ ಪಂಚಾಯತ್‌ಗೆ ಪತ್ರ ಮುಖೇನ ತಿಳಿಸಬೇಕು.

*ಮಕ್ಕಳ ಮಿತ್ರರಿಗೆ ಇರಬೇಕಾದ ಅರ್ಹತೆಗಳು*

- ಮಕ್ಕಳೇ ಆಯ್ಕೆ ಮಾಡಿದ ಮಕ್ಕಳ ಸ್ನೇಹಿ ಪುರುಷ ಅಥವಾ ಮಹಿಳೆ.
- ಮಕ್ಕಳು ಹೇಳಿದ್ದನ್ನು ಕೇಳಿಸಿಕೊಳ್ಳುವವರಾಗಿರಬೇಕು.
- ಸಂದರ್ಭಾನುಸಾರ ಗೌಪ್ಯತೆ ಕಾಪಾಡಬೇಕು.
- ಸೂಕ್ಷ್ಮಗ್ರಾಹಿಯಾಗಿರಬೇಕು.
- ಯಾವುದೇ ಸಂದರ್ಭದಲ್ಲಿ ಮಕ್ಕಳ ರಕ್ಷಣೆಗೆ ಬದ್ಧರಾಗಿರಬೇಕು.
- ಮಕ್ಕಳಿಗೆ ಸಮಯ ನೀಡುವವರಾಗಿರಬೇಕು.
- ಮಕ್ಕಳಿಗೆ ಗೌರವ ಕೊಡುವವರಾಗಿರಬೇಕು.
- ಕನಿಷ್ಟ ಓದು-ಬರಹ ಬಲ್ಲವರಾಗಿರಬೇಕು ಅಥವಾ ಓದು ಬರಹ ಬರುವವರ ಸಹಾಯವನ್ನು ಪಡೆಯಲು ಬದ್ಧರಿರಬೇಕು.
- ಯಾವುದೇ ರೀತಿಯ ತಾರತಮ್ಯ ಭಾವನೆ ಇರಬಾರದು.
- ಮಕ್ಕಳನ್ನು ಅರ್ಥಮಾಡಿಕೊಳ್ಳುವವರು ಹಾಗೂ ಅವರ ಸಮಸ್ಯೆಗೆ ಸ್ಪಂದಿಸುವವರು ಆಗಿರಬೇಕು.
- ಪ್ರಾಮಾಣಿಕರಾಗಿರಬೇಕು.
- ಸಹನೆ ಮತ್ತು ತಾಳ್ಮೆ ಇರಬೇಕು.

- ಮಕ್ಕಳು ಹೇಳಿದ ವಿಷಯವನ್ನು ಕಡೆಗಣಿಸಬಾರದು.
- ಎಲ್ಲಾ ಮಕ್ಕಳನ್ನು ತಮ್ಮ ಮಕ್ಕಳ ತರಹ ಪ್ರೀತಿಯಿಂದ ನೋಡಿಕೊಳ್ಳಬೇಕು.
- ಪಕ್ಷ ರಾಜಕೀಯ ಮಾಡಬಾರದು ಹಾಗೂ ಯಾವುದೇ ಸಂದರ್ಭದಲ್ಲಿ ರಾಜಕೀಯ ಒತ್ತಡಕ್ಕೆ ಮಣಿಯಬಾರದು.
- ಮಕ್ಕಳ ಮೇಲೆ ಯಾವುದೇ ರೀತಿಯ ಒತ್ತಡ ಹಾಕಬಾರದು.
- ಮಕ್ಕಳ ಮಿತ್ರರಿಗೆ ಯಾವುದೇ ದುಶ್ಚಟ ಇರಬಾರದು.
- ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳು ಭಾಗವಹಿಸಲು ಸೌಕರ್ಯಕಾರಿಕೆ ಮಾಡಬೇಕು.
- ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿ ಇರಬೇಕು ಮತ್ತು ಮಾಹಿತಿ ನೀಡುವ ಕೌಶಲ್ಯ ಇರಬೇಕು.
- ಶಾಂತ ಸ್ವಭಾವದವರಾಗಿರಬೇಕು, ಧೈರ್ಯವಂತರಾಗಿರಬೇಕು.
- ಮಕ್ಕಳ ಸಂಘಗಳಿಗೆ ಸಮಯವಿದ್ದಾಗ ಭೇಟಿ ನೀಡಬೇಕು.
- ಮಕ್ಕಳ ಮಿತ್ರರು ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರಬಾರದು.
- ಮಕ್ಕಳಿಗೆ ಮಾನಸಿಕ, ದೈಹಿಕ ಹಾಗೂ ಭಾವನಾತ್ಮಕವಾದ ತೊಂದರೆಗಳನ್ನು ನೀಡಬಾರದು.
- 18 ವರ್ಷಕ್ಕಿಂತ ಮೇಲ್ಪಟ್ಟದರಾಗಿರಬೇಕು.
- ಮಕ್ಕಳಿಗೆ ಸಂಘಟಿತರಾಗಲು ಪ್ರೋತ್ಸಾಹ ನೀಡಬೇಕು ಮತ್ತು ಸಂಘಟನೆಯ ಬಗ್ಗೆ ಮಾಹಿತಿ ನೀಡುವಂತವರಾಗಿರಬೇಕು.
- ಮಕ್ಕಳಿಗೆ ಸಂಬಂಧಿಸಿದ ಯಾವುದೇ ಸಭೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು.
- ಮಕ್ಕಳ ಸಮಸ್ಯೆಯ ಬಗ್ಗೆ ಸ್ಥಳೀಯ ಸರ್ಕಾರದ ಜೊತೆ ಚರ್ಚಿಸಿ ಬಗೆಹರಿಸಬೇಕು.
- ಮಕ್ಕಳು ಬೇರೆ ಬೇರೆ ಮಾಹಿತಿ ಪಡೆದುಕೊಳ್ಳಲು ಸಹಾಯ ಮಾಡಬೇಕು.
- ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಬೇಕು.
- ಯಾವುದೇ ಸಂದರ್ಭದಲ್ಲಿ ಮಕ್ಕಳಿಗೆ ಅಗತ್ಯವೆನಿಸಿದ ತಾತ್ಕಾಲಿಕ ಅಗತ್ಯ ರಕ್ಷಣೆಯ ವ್ಯವಸ್ಥೆ ಮಾಡಬೇಕು.

## *ಮಹಿಳಾ ಮಿತ್ರ*

***ಮಹಿಳಾ ಮಿತ್ರ ಯಾಕೆ:***

ಯಾವುದೇ ಒಬ್ಬ ಮಹಿಳೆ ಸಮಾಜದಿಂದ, ಕೆಲವು ವ್ಯಕ್ತಿಗಳಿಂದ, ಕುಟುಂಬದ ಸದಸ್ಯರಿಂದ, ಪೋಷಕರಿಂದ ತಂದೆ/ತಾಯಿಯಿಂದ ಹಾಗೂ  ಗಂಡನಿಂದ ಇತರೆ ವ್ಯವಸ್ಥೆಗಳಿಂದ ದೈಹಿಕವಾಗಿ, ಮಾನಸಿಕವಾಗಿ, ಲೈಂಗಿಕವಾಗಿ ನೋವು, ಹೊಡೆತ, ಕಿರುಕುಳಗಳನ್ನು ಅನುಭವಿಸುತ್ತಿದ್ದು, ಅಂತಹ ವಿಷಯಗಳನ್ನು ಸ್ನೇಹಿತರ ಜೊತೆಯಾಗಲೀ, ಕುಟುಂಬದ ಸದಸ್ಯರೊಂದಿಗಾಗಲೀ, ತಂದೆ/ತಾಯಿ/ಪೋಷಕರೊಂದಿಗಾಗಲೀ,  ಹೇಳಿಕೊಳ್ಳಲು ಸಾಧ್ಯವಾಗದೇ ಇರುವ ಸಂದರ್ಭದಲ್ಲಿ; ಒಂದೊಮ್ಮೆ ಹೇಳಿಕೊಂಡರೂ ಅವರನ್ನು ಅನುಮಾನದಿಂದ ನೋಡುವ ಸಂದರ್ಭಗಳು ಬಂದಾಗ; ಹೇಳಿಕೊಳ್ಳಲೂ ಆಗದೇ, ಹೇಳದೇ ಇರಲೂ ಆಗದೇ, ಭಯ-ಒತ್ತಡ-ಬೆದರಿಕೆಗಳೊಂದಿಗೆ ಬದುಕುವ ಸನ್ನಿವೇಶ ಬಂದಾಗ ಸಹಜವಾಗಿ ಮಕ್ಕಳು ಮಾನಸಿಕ ಒತ್ತಡಕ್ಕೆ ಒಳಗಾಗಿ ಅಪಾಯ ತಂದುಕೊಳ್ಳುವ ಪರಿಸ್ಥಿತಿ ಎದುರಾಗುತ್ತದೆ. ಇಂತಹ ಪರಿಸ್ಥಿತಿಯಿಂದ ಹೊರಬರಲು, ತಮ್ಮ ಮೇಲೆ ಆಗುವ ದೌರ್ಜನ್ಯವನ್ನು ತಮಗೆ ಆಪ್ತರೆನಿಸಿಕೊಂಡಿರುವ ಒಬ್ಬ ವ್ಯಕ್ತಿಯೊಡನೆ ಹೇಳಿಕೊಳ್ಳುವ ಅವಕಾಶ ಕಲ್ಪಿಸಿಕೊಡುವುದಕ್ಕೆ ಇರುವುದು ***'ಮಹಿಳಾ ಮಿತ್ರ'*** ವ್ಯವಸ್ಥೆ.

***ಮಹಿಳಾ ಮಿತ್ರರಾಗಿ ಯಾರನ್ನು ಆಯ್ಕೆಮಾಡಬಹುದು ಎಂಬುದಕ್ಕೆ ಪ್ರಸ್ತುತ ಆಲೋಚನೆಗಳು:***

- ಪಂಚಾಯತ್ ವ್ಯಾಪ್ತಿಯಲ್ಲಿರುವ ಮಹಿಳೆಯರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು, ಆ ಪ್ರದೇಶದಲ್ಲಿರುವ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಕೊಂಡಿರುವ, ಮಹಿಳೆಯರ ಹಕ್ಕು ಮತ್ತು ರಕ್ಷಣೆಯನ್ನು ಕಾಳಜಿಯಿಂದ ರಕ್ಷಿಸುವ, ಯಾವುದೇ ನಂಬಿಕಸ್ಥ ಮಹಿಳೆಯನ್ನು ಮಹಿಳಾ ಮಿತ್ರರಾಗಿ ಆಯ್ಕೆ ಮಾಡಿಕೊಳ್ಳಬಹುದು.
- ಹೀಗೆ ಆಯ್ಕೆ ಮಾಡಿಕೊಳ್ಳುವ ಮಹಿಳೆಯನ್ನು ಭೇಟಿಯಾಗಿ ಅವರೊಂದಿಗೆ ಚರ್ಚಿಸಿ ಅವರ ಒಪ್ಪಿಗೆಯನ್ನು ಪಡೆದುಕೊಳ್ಳಬೇಕು.
- ಆಯಾ ಪ್ರದೇಶದ ಭೌಗೋಳಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ತಮಗೆ ಅಗತ್ಯವೆನಿಸಿದಷ್ಟು ಮಹಿಳೆಯರನ್ನು ಆಯ್ಕೆ ಮಾಡಿಕೊಳ್ಳಬಹುದು.

***ಮಕ್ಕಳ ಮಿತ್ರರನ್ನು ಯಾರು ಗುರುತಿಸಿ ಮಾನ್ಯತೆ ನೀಡಬೇಕು:***

- ಆಯಾ ಪಂಚಾಯತ್ ವ್ಯಾಪ್ತಿಯಲ್ಲಿ ಮಕ್ಕಳೇ ತಯಾರಿಸಿದ ಮಾನದಂಡ ಅರ್ಹತೆಯ ಆಧಾರದಲ್ಲಿ ಗುರುತಿಸಿದ ಮಕ್ಕಳ ಮಿತ್ರರನ್ನು ಗ್ರಾಮ ಪಂಚಾಯತ್ ಗುರುತಿಸಿ ಗೌರವಿಸಬೇಕು ಹಾಗೂ ಅವರಿಗೆ ಮಾನ್ಯತೆ ನೀಡಬೇಕು.

***ಮಹಿಳಾ ಮಿತ್ರರ ಅವಧಿ:***

- ಆಯ್ಕೆಯಾದ ಮಹಿಳಾ ಮಿತ್ರರ ಅವಧಿ ಕನಿಷ್ಟ 2 ವರ್ಷ
- ಹೀಗೆ ಆಯ್ಕೆಯಾದ ಮಹಿಳಾ ಮಿತ್ರರು ತಾವು ಮಹಿಳಾ ಮಿತ್ರರಾಗಿ ಮುಂದುವರೆಯಲು ಇಚ್ಛೆಪಟ್ಟಲ್ಲಿ ಮಹಿಳೆಯರಿಗೂ ಅವರು ಮುಂದುವರೆಯಲು ಇಷ್ಟವಾದಲ್ಲಿ ಅವರನ್ನು ಮರು ನೇಮಕ ಮಾಡಬಹುದು.
- ಒಂದೊಮ್ಮೆ ಅವರು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ ಎಂದು ಅವರಿಗೆ ಅನಿಸಿದರೆ ಅವರೇ ನಿವೃತ್ತಿ ಹೊಂದಬಹುದು.
- ಹೀಗೆ ನಿವೃತ್ತಿ ಹೊಂದಿದ ಮಹಿಳಾ ಮಿತ್ರರು ಹೊಸದಾಗಿ ಆಯ್ಕೆಯಾಗುವ ಮಹಿಳಾ ಮಿತ್ರರಿಗೆ ತಮ್ಮ ಅವಧಿಯಲ್ಲಿ ನಿರ್ವಹಿಸಿರುವ ಕೆಲಸದ ಅನುಭವವನ್ನು ಹಂಚಿಕೊಳ್ಳಬಹುದು. ಅಗತ್ಯ ಬಿದ್ದರೆ ಹೊಸ ಮಹಿಳಾ ಮಿತ್ರರಿಗೆ ಸಲಹೆಗಳನ್ನು ನೀಡಬಹುದು.

***ಮಹಿಳಾ ಮಿತ್ರರ ಜವಾಬ್ದಾರಿಗಳು:***

- ಮಹಿಳೆಯರಿಂದ ಆಯ್ಕೆಯಾದ ಮಹಿಳಾ ಮಿತ್ರರು ಮಹಿಳೆಯರಿಗೆ ಬದ್ಧರಾಗಿರಬೇಕು.
- ಯಾವುದೇ ಪರಿಸ್ಥಿತಿಯಲ್ಲಿ ಮಹಿಳೆಯರ ರಕ್ಷಣೆ ಅವರ ಮೊದಲ ಆದ್ಯತೆ ಆಗಿರಬೇಕು.
- ಮಹಿಳೆಯರಿಗೆ ಸಂಪರ್ಕಕ್ಕೆ ಸದಾ ಲಭ್ಯರಿರುವಂತವರಾಗಿರಬೇಕು.
- ಮಹಿಳಾ ಮಿತ್ರರು ತಮ್ಮ ಹೆಸರು, ಸಂಪರ್ಕ ವಿಳಾಸ ಹಾಗೂ ದೂರವಾಣಿ ಸಂಖ್ಯೆಯನ್ನು ಪ್ರದೇಶದ ಎಲ್ಲಾ ಮಹಿಳೆಯರಿಗೆ ಸಿಗುವ ಹಾಗೆ ಪ್ರಚಾರ ಹಾಗೂ ಪೋಸ್ಟರ್ ಮೂಲಕ ಪ್ರದರ್ಶಿಸಬೇಕು.

***ಮಹಿಳಾ ಮಿತ್ರರ ಅರ್ಹತೆಗಳು:***

- ಮಹಿಳೆಯರೇ ಆಯ್ಕೆ ಮಾಡಿದ ಮಹಿಳಾ ಸ್ನೇಹಿ ಮಹಿಳೆ.
- ಯಾವುದೇ ಸಂದರ್ಭದಲ್ಲಿ ಗೌಪ್ಯತೆ ಕಾಪಾಡಬೇಕು.
- ಸೂಕ್ಷ್ಮಗ್ರಾಹಿಯಾಗಿರಬೇಕು.
- ಯಾವುದೇ ಸಂದರ್ಭದಲ್ಲಿ ಮಹಿಳೆಯರ ರಕ್ಷಣೆಗೆ ಬದ್ಧರಾಗಿರಬೇಕು.

- ಕನಿಷ್ಟ ಓದು–ಬರಹ ಬಲ್ಲವರಾಗಿರಬೇಕು ಅಥವಾ ಓದು ಬರಹ ಬರುವವರ ಸಹಾಯವನ್ನು ಪಡೆಯಲು ಬದ್ಧರಿರಬೇಕು.
- ಯಾವುದೇ ರೀತಿಯ ತಾರತಮ್ಯ ಭಾವನೆ ಇರಬಾರದು.
- ಮಹಿಳೆಯರು ಹೇಳಿದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವವರು ಆಗಿರಬೇಕು.
- ಮಹಿಳೆಯರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವವರಾಗಿರಬೇಕು.
- ಪ್ರಾಮಾಣಿಕರಾಗಿರಬೇಕು, ಸಹನೆ ಮತ್ತು ತಾಳ್ಮೆ ಇರಬೇಕು.
- ಮಹಿಳೆಯರು ಹೇಳಿದ ಸಮಸ್ಯಾತ್ಮಕ ವಿಷಯವನ್ನು ಕಡೆಗಣಿಸಬಾರದು.
- ಪಕ್ಷ ರಾಜಕೀಯ ಮಾಡಬಾರದು ಹಾಗೂ ಯಾವುದೇ ಸಂದರ್ಭದಲ್ಲಿ ರಾಜಕೀಯ ಒತ್ತಡಕ್ಕೆ ಮಣಿಯಬಾರದು.
- ಮಹಿಳೆಯರ ಮೇಲೆ ಯಾವುದೇ ರೀತಿಯ ಒತ್ತಡ ಹಾಕಬಾರದು.
- ಪ್ರಸಕ್ತ ಪರಿಸ್ಥಿತಿಯ, ವಿದ್ಯಮಾನಗಳ ಬಗ್ಗೆ ಮಾಹಿತಿ ಮತ್ತು ಜ್ಞಾನ ಇರಬೇಕು.
- ಮಹಿಳಾ ಕಾನೂನು ಮತ್ತು ಅವರ ರಕ್ಷಣೆಯ ಬಗ್ಗೆ ಇರುವ ವ್ಯವಸ್ಥೆಯ ಬಗ್ಗೆ ಮಾಹಿತಿ ಮತ್ತು ಜ್ಞಾನವಿರಬೇಕು ಮತ್ತು ಆ ಕುರಿತಾಗಿ ಮಾಹಿತಿ ನೀಡುವ ಕೌಶಲ್ಯ ಇರಬೇಕು.
- ಮಹಿಳಾ ರಕ್ಷಣೆಗಾಗಿ ಇರುವ ವ್ಯವಸ್ಥೆ ಮತ್ತು ರಚನೆಯಲ್ಲಿರುವ ವ್ಯಕ್ತಿಗಳ ಸಂಪರ್ಕ ಬೆಳೆಸಿಕೊಳ್ಳಬೇಕು.
- ಶಾಂತ ಸ್ವಭಾವದವರಾಗಿರಬೇಕು, ಧೈರ್ಯವಂತರಾಗಿರಬೇಕು.
- ದುಡುಕಿನ ನಿರ್ಧಾರ ತೆಗೆದುಕೊಳ್ಳುವವರಾಗಿರಬಾರದು.
- ಮಹಿಳಾ ಸಂಘಗಳಿಗೆ, ಗುಂಪುಗಳೊಂದಿಗೆ ಸಮಯವಿದ್ದಾಗ ಭೇಟಿ ನೀಡಿ ಚರ್ಚಿಸಬೇಕು.
- ಮಹಿಳಾ ಮಿತ್ರರು ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರಬಾರದು.
- ಮಹಿಳಾ ಮಿತ್ರರು ಸಮಾಜದಲ್ಲಿಯೂ, ತಮ್ಮ ಕುಟುಂಬದಲ್ಲಿಯೂ ಮಹಿಳೆಯರಿಗೆ ಸಮಾನ ಗೌರವ ಮತ್ತು ಅವಕಾಶ ಕೊಡುವವರಾಗಿರಬೇಕು.
- ಮಹಿಳೆಯರಿಗೆ ಸಂಬಂಧಿಸಿದ ಯಾವುದೇ ಸಭೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು. ಮತ್ತು ಮಹಿಳೆಯರ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಹೇಳಿಕೊಳ್ಳುವ ಸಾಮರ್ಥ್ಯವಿರಬೇಕು.
- ಮಹಿಳೆಯರ ಸಮಸ್ಯೆಗಳ ಬಗ್ಗೆ ಸ್ಥಳೀಯ ಸರ್ಕಾರದ ಜೊತೆ ಚರ್ಚಿಸಿ ಬಗೆಹರಿಸುವ ಸಾಮರ್ಥ್ಯ ಹೊಂದಿರಬೇಕು.
- ಮಹಿಳೆಯರು ಬೇರೆ ಬೇರೆ ರೀತಿಯ ಮಾಹಿತಿ ಪಡೆದುಕೊಳ್ಳಲು ಸಹಾಯ ಮಾಡಬೇಕು.
- ಸಂಘಟನೆ ಮಾಡುವ ಮತ್ತು ಸಂಘಟನೆಯೊಂದಿಗೆ ಬೆರೆಯುವ ಮನೋಭಾವ ಇರಬೇಕು.
- ಮಹಿಳೆಯರಿಗೆ ಆತ್ಮಸ್ಥೈರ್ಯ ತುಂಬುವ ಕೌಶಲ್ಯವಿರಬೇಕು.
- ಮೂಢನಂಬಿಕೆ, ಸಾಮಾಜಿಕ ಪಿಡುಗುಗಳ ದುಷ್ಪರಿಣಾಮ ಕುರಿತಾಗಿ ಮಾಹಿತಿ ಇರಬೇಕು.

## *ಮಹಿಳಾ ಮಿತ್ರ ಹಾಗೂ ಮಕ್ಕಳ ಮಿತ್ರರ ನಡವಳಿಕೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳು*

***ಏನು ಮಾಡಬೇಕು:***

- ಯಾವುದೇ ವಿಷಯದಲ್ಲಿ ಗೌಪ್ಯತೆ ಕಾಪಾಡಬೇಕು.
- ಮಕ್ಕಳು ಮಹಿಳೆಯರ ಬಾಹ್ಯ ಸ್ವರೂಪಗಳನ್ನು ಪರಿಗಣಿಸದೇ ಅವರ ಆಂತರಿಕ ವ್ಯಕ್ತಿತ್ವವನ್ನು ಗುರುತಿಸಬೇಕು.
- ಸಹಾಯ ಕೇಳಿ ಬರುವ ಮಹಿಳೆ/ಮಗುವಿನ ತಕ್ಷಣದ ಅಗತ್ಯತೆಗಳನ್ನು ಗಮನಿಸಬೇಕು – ಊಟ ಆಗಿದೆಯೇ? ಕುಡಿಯಲು ನೀರು ಬೇಕಾ? ಮುಖ ಕೈಕಾಲು ತೊಳೆದುಕೊಳ್ಳುತ್ತೀರಾ? ಚಾ ಕುಡಿಯುತ್ತೀರಾ? ಸ್ವಲ್ಪ ಹೊತ್ತು ಹಾಗೆ ಸುಮ್ಮನೆ ಮಲಗುತ್ತೀರಾ/ಕುಳಿತುಕೊಳ್ಳುತ್ತೀರಾ? ಮುಂತಾಗಿ ಉಪಚರಿಸಿ ಅವರ ವ್ಯಕ್ತಿತ್ವಕ್ಕೆ ಮಹತ್ವ ಕೊಡಬೇಕು.

- ಮಹಿಳೆ/ಮಗುವು ಹೇಳುವುದನ್ನು ಗಂಭೀರವಾಗಿ ಲಕ್ಷ್ಯಗೊಟ್ಟು ಕೇಳಿಸಿಕೊಳ್ಳಬೇಕು. ನಿಮಗೆ ಇನ್ನೂ ಹೆಚ್ಚು ತಿಳಿದುಕೊಳ್ಳಬೇಕೆನಿಸಿದರೆ ಅದು ಏಕೆ ಎಂದು ವಿವರಿಸಿ, ಪ್ರಶ್ನೆ ಕೇಳಬೇಕು.
- ಮಗು/ಮಹಿಳೆಗೆ ನೀವು ಅವರು ತಿಳಿಸುವ ಸ್ಥಳದಲ್ಲಿ ಭೇಟಿ ಆದರೆ ಉತ್ತಮ ಎಂದಿದ್ದರೆ ಒಂದೆರಡು ಬಾರಿ ಅವರನ್ನು ಅಲ್ಲೇ ಭೇಟಿ ಮಾಡಬೇಕು.
- ಮಹಿಳೆ/ಮಗುವಿಗೆ ಅವರ ಸಮಸ್ಯೆಗಳನ್ನು ಬಗೆಹರಿಸಲು ಇರುವ ಅವಕಾಶದ ದಾರಿಗಳನ್ನು ತಿಳಿಸಿ ಅವರೊಂದಿಗೆ ಚರ್ಚಿಸಬೇಕು. ಅವರಿಗೆ ಆಲೋಚಿಸಲು ಸಮಯ ಅಗತ್ಯವಾದರೆ, ಅವರಷ್ಟಕ್ಕೇ ಬಿಟ್ಟು ನಂತರ ಅವರ ಅಭಿಪ್ರಾಯ ಪಡೆದೇ ಮುಂದಿನ ಹೆಜ್ಜೆ ಇಡಬೇಕು.
- ಮಹಿಳೆ/ಮಗುವಿಗೆ ಅವರ ಸಮಸ್ಯೆಗಳನ್ನು ಬಗೆಹರಿಸಲು ವ್ಯಕ್ತಿ/ಇಲಾಖೆಯ ಸಹಾಯ ಅಗತ್ಯವಿದ್ದಾಗ ಅದು ಯಾಕೆ ಎಂದು ಮಹಿಳೆ/ಮಗುವಿಗೆ ಮನದಟ್ಟು ಮಾಡಿಯೇ ಮುಂದುವರೆಯಬೇಕು.
- ಜಾತಿ, ಮತ, ಪ್ರದೇಶ ಮುಂತಾದ ವಿಷಯಗಳ ಆಧಾರಲ್ಲಿ ಮಗು/ಮಹಿಳೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಾರದು.
- ಮಗು/ ಅಥವಾ ಮಹಿಳೆಯ ಬಗ್ಗೆ ತಮಗೆ ಈಗಾಗಲೇ ಏನಾದರೂ ಮಾಹಿತಿ ಇದ್ದರೆ ಅದನ್ನು ಬದಿಗಿಟ್ಟು ಮಹಿಳೆ/ ಮಗು ಪ್ರಸ್ತುತ ಹೇಳುವುದನ್ನು ಕೇಳಿಸಿಕೊಳ್ಳಬೇಕು.
- ಮಗು/ಮಹಿಳೆ ತನ್ನೊಂದಿಗೆ ಯಾವುದೇ ಸಂಕೋಚ ಇಲ್ಲದೆ ಮಾತನಾಡಲು ಏನು ಮಾಡಬೇಕು ಎಂದು ಆಲೋಚಿಸಿ, ತನ್ನೊಂದಿಗೆ ಕಷ್ಟ ಹೇಳಿಕೊಳ್ಳಲು ಬರುವ ಪ್ರತಿ ಮಹಿಳೆ/ಮಗುವಿನ ಬಗ್ಗೆ ಆಲೋಚಿಸಿ, ಆ ಪ್ರಕಾರ ಅವರಿಗೆ ಮಾತನಾಡಲು ಉತ್ತೇಜನ ಕೊಡುವ ವಾತಾವಣವನ್ನು ಅವರಿಗೆ ಒದಗಿಸುತ್ತಾ ಹೋಗಬೇಕು.
- ವಿಷಯದ ಸೂಕ್ಷ್ಮತೆಯನ್ನು ಅರಿತುಕೊಳ್ಳಬೇಕು.
- ಯಾವುದೇ ತೀರ್ಮಾನ ತೆಗೆದುಕೊಳ್ಳುವ ಮೊದಲು ಸಂಬಂಧಪಟ್ಟವರೊಂದಿಗೆ ಚರ್ಚಿಸಿಕೊಳ್ಳಬೇಕು.
- ಸಮಸ್ಯೆಗೆ ಒಳಪಟ್ಟ ಮಗು ಅಥವಾ ವ್ಯಕ್ತಿಗಳ ರಕ್ಷಣೆಗೆ ಪ್ರಥಮ ಪ್ರಾಮುಖ್ಯತೆ ಕೊಡಬೇಕು.
- ಯಾವುದೇ ತೀರ್ಮಾನವನ್ನು ಪ್ರಜಾಪ್ರಭುತ್ವದ ನೆಲೆಯಲ್ಲಿ ತೆಗೆದುಕೊಳ್ಳಬೇಕು.
- ನಿಮ್ಮೊಂದಿಗೆ ಸಮಸ್ಯೆ ಹೇಳಿಕೊಳ್ಳಲು ಬರುವ ಮಹಿಳೆ/ಮಗುವಿಗೆ ನಿಮ್ಮೊಂದಿಗೆ ಮುಖಾಮುಖಿ ಕುಳಿತುಕೊಂಡು ಮಾತನಾಡಲು ಸಹನೀಯವೇ, ಅವರು ನಿರಾಳವಾಗಿದ್ದಾರಾ? ಏನಾದರೂ ಆತಂಕದಲ್ಲಿ ಇದ್ದಾರಾ? ಯಾರಾದರೂ ಬಂದರೆ? ಯಾರಿಗಾದರೂ ಗೊತ್ತಾದರೆ ಇತ್ಯಾದಿ ವಿಷಯಗಳಲ್ಲಿ ಆತಂಕ ಇದೆಯೇ ಗಮನಿಸಿ, ಅದನ್ನು ತಕ್ಷಣ ನಿವಾರಿಸಿ, ಅವರು ನಿರಾಳವಾಗುವ ಹಾಗೆ ಮಾಡಬೇಕು.
- ಮಹಿಳೆ/ಮಗು ನಿಮ್ಮೊಂದಿಗೆ ಇರುವಾಗ ಅಕಸ್ಮಾತ್ ನಿಮಗೆ ತುರ್ತು ಕರೆ ಬಂದರೆ/ಕರೆ ಮಾಡಬೇಕಾದ ಸಂದರ್ಭ ಬಂದರೆ ಎದುರಿಗೆ ಇರುವವರಿಗೆ ಯಾಕೆ ನೀವು ಕರೆ/ಸ್ವೀಕರಿಸುತ್ತಿದ್ದೀರಿ/ಮಾಡುತ್ತಿದ್ದೀರಿ ಎಂದು ವಿವರಿಸಿ ಮುಂದುವರಿಯಬೇಕು. ಸಾಧ್ಯವಾದಷ್ಟರ ಮಟ್ಟಿಗೆ ಅವರ ಎದುರೇ ಮಾತನಾಡಬೇಕು.
- ಊರಿನ ಬಲಾಢ್ಯ /ಪ್ರಭಾವಿ ವ್ಯಕ್ತಿಯಿಂದ ತೊಂದರೆ ಆದಲ್ಲಿ, ಅದನ್ನು ಮಕ್ಕಳ ಮತ್ತು ಮಹಿಳಾ ಮಿತ್ರರಿಗೆ ಸಂಬಂಧಪಟ್ಟವರ ಜೊತೆ ಎತ್ತಲು ಕಷ್ಟವಾದಲ್ಲಿ ಊರಿನಲ್ಲಿರುವ ಸಂಘಟನೆಗಳ ಮೂಲಕ ಅಂತಹ ವಿಷಯಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಆಲೋಚಿಸಬೇಕು.
- ಮಗು/ಮಹಿಳೆ ಹೇಳುವುದು ನಿಜವಲ್ಲ ಎಂದು ಗೊತ್ತಾದಾಗಲೂ ತಾಳ್ಮೆಯಿಂದ ಪ್ರಶ್ನೆ ವಿವರಗಳನ್ನು ಕೇಳಿ ಪಡೆದರೆ ಅವರು ಮೊದಲು ಹಾಗೆ ಹೇಳಲು ಕಾರಣ ತಿಳಿಯುತ್ತದೆ. ಅದರಿಂದ ಪರಿಹಾರದ ದಾರಿಯ ಆಲೋಚನೆಗೆ ಅನುಕೂಲವಾಗುತ್ತದೆ.

*ಏನು ಮಾಡಬಾರದು:*

- ವಿಷಯಕ್ಕೆ ಅನಗತ್ಯ ಪ್ರಚಾರ ನೀಡಬಾರದು.
- ಪಕ್ಷ ರಾಜಕೀಯ ಮಾಡಬಾರದು.
- ಗಂಡು/ಹೆಣ್ಣು, ಭಾಷೆ, ಧರ್ಮ, ಜಾತಿ, ಲಿಂಗ ಬೇದ ಮಾಡಬಾರದು.
- ಸ್ವಜನ ಪಕ್ಷಪಾತ ಮಾಡಬಾರದು.
- ಬ್ಲಾಕ್ ಮೇಲ್ ಮಾಡಬಾರದು.
- ಮಗು/ ಮಹಿಳೆಯ ಮೇಲೆ ನಿಮ್ಮ ನಂಬಿಕೆ, ಆಲೋಚನೆಗಳನ್ನು ಹೇರಬಾರದು. ಉದಾ– ಆತ ನಿನ್ನನ್ನು ಬಲಾತ್ಕಾರ ಮಾಡಿದ್ದಾನೆ. ನೀನು ಈಗ ಹಾಳಾಗಿದ್ದೀಯಾ. ಹಾಗಾಗಿ ನಿನ್ನನ್ನು ಯಾರೂ ಮದುವೆ ಆಗುವುದಿಲ್ಲ. ಹಾಗಾಗಿ ಕಷ್ಟವೋ ಸುಖವೋ ಅವನನ್ನೇ ಮದುವೆ ಆಗು. ನೀನು ತಪ್ಪು ಮಾಡಿದ್ದೀಯ, ಪರವಾಗಿಲ್ಲ ಬಿಡು. ಅವರು ಒಳ್ಳೆಯವರು ಅವರು ಹಾಗೆ ಮಾಡಿರಲಿಕ್ಕೆ ಇಲ್ಲ ಇತ್ಯಾದಿ.
- ಅವರ ಸಮಸ್ಯೆಯನ್ನು ನೀವೇ ಬಗೆಹರಿಸುವವರು ಅನ್ನುವ ಭಾವನೆ ಮೂಡಿಸಬಾರದು.
- ಮಹಿಳೆ/ಮಗುವಿಗೆ ತಪ್ಪು ಮಾಡಿದ್ದರೂ ನೀವು ಕ್ಷಮಿಸಿದ್ದೀರಿ ಎನ್ನುವ ಅರ್ಥ ಬರುವ ಮಾತು ಅಥವಾ ದೈಹಿಕ ನಡವಳಿಕೆಯನ್ನು ಅವರಿಗೆ ತೋರಿಸಬಾರದು.
- ಮಹಿಳೆ/ಮಗುವಿಗೆ ನಂಬಿಕೆ ಇಲ್ಲದ ವ್ಯಕ್ತಿ ಮೇಲೆ ನಿಮಗೆ ಎಷ್ಟೇ ನಂಬಿಕೆ ಇದ್ದರೂ ಆರಂಭದಲ್ಲಿ ಅದನ್ನು ಪ್ರಕಟಿಸಬಾರದು.
- ಮಹಿಳೆ/ಮಗುವಿಗೆ ಇದು ಬಹಳ ತುರ್ತು. ಬೇಗ ಬೇಗ ಹೇಳು, ತಡವಾದರೆ ತೊಂದರೆ ಇತ್ಯಾದಿ ಹೇಳಿ ಹೆದರಿಸಬಾರದು.
- ಪ್ರಪಂಚದಲ್ಲಿ ಬೇರೆಯವರು ಮಾಡದ ಭಯಂಕರ ಅಪರಾಧ ಮಾಡಿದ್ದೀಯ ಅನ್ನುವ ತರಹದ ಯಾವುದೇ ಮಾತು, ಅಭಿನಯ, ಅಥವಾ ತೀರಾ ಕರುಣೆಯಲ್ಲಿ ನೀನು ಬಹಳ ಪಾಪ ಎಂದು ಲೊಚಗುಟ್ಟುವುದನ್ನು ಮಾಡಬಾರದು.
- ಪದೇ ಪದೇ ನೀನು ಅಮಾಯಕ/ ದುರ್ಬಲ/ ನೀನು ಕೈಲಾಗದವ ಎನ್ನುವ ಅರ್ಥ ಬರುವ ಯಾವುದೇ ಮಾತುಗಳನ್ನು ಆಡಬಾರದು.
- ಮಹಿಳೆ/ಮಗುವಿನ ಮನೆತನ, ಅಣ್ಣ/ಅಪ್ಪ/ಗಂಡ ಅಥವಾ ಇನ್ನಾವುದೇ ಸಂಬಂಧ/ ಇಂಥ ಶಾಲೆ/ ಕೆಲಸದ ಸ್ಥಳ/ಜಾತಿ ಧರ್ಮಗಳನ್ನು ಉಲ್ಲೇಖಿಸಿ, ಇಂಥ ನೀನು ಹೇಗೆ ಇದನ್ನು ಮಾಡಿದೆ? ಎನ್ನುವ ಅರ್ಥ ಬರುವ ಯಾವುದೇ ಮಾತುಗಳನ್ನು ಆಡಬಾರದು.
- ಮಹಿಳೆ/ಮಗುವಿನೊಂದಿಗೆ ಮಾತನಾಡುವಾಗ ಕಡ್ಡಾಯವಾಗಿ ನಿಮ್ಮ ಮೊಬೈಲ್ ಅಥವಾ ಸ್ಥಿರ ದೂರವಾಣಿ ಕರೆಗಳನ್ನು ಸ್ವೀಕರಿಸಬಾರದು/ ಹಾಗೂ ಕರೆಗಳನ್ನು ಮಾಡಬಾರದು.
- ಮಹಿಳೆ/ಮಗುವಿನೊಂದಿಗೆ ಮಾತನಾಡುತ್ತಿರುವ ಮಧ್ಯೆ ಎದ್ದು ಹೋಗುವುದು, ಬೇರೆಯವರ ಹತ್ತಿರ ಮಾತನಾಡುವುದನ್ನು ಮಾಡಬಾರದು.
- ಮಾತನಾಡುತ್ತಿರುವಾಗ ಯಾರಾದರೂ ಬಂದರೆ– ಅಯ್ಯೋ ಪಾಪ–ಇವಳಿಗೆ ಕಷ್ಟ ಇತ್ಯಾದಿ ವಿವರಗಳನ್ನು ಕೊಡಬಾರದು.
- ಕೆಲವೊಮ್ಮೆ ಮಹಿಳೆ/ಮಗು ಹೇಳುತ್ತಿರುವುದು ನಿಜವಲ್ಲ ಅಂತ ಗೊತ್ತಾದ ತಕ್ಷಣ ಬುದ್ಧಿವಂತಿಕೆ ತೋರಿಸಿ ಅವರ ತಪ್ಪನ್ನು ಹಿಡಿಯುವ ಪ್ರಯತ್ನ ಮಾಡಬಾರದು.

## ಮಹಿಳಾ ಮಿತ್ರ ಮತ್ತು ಮಕ್ಕಳ ಮಿತ್ರ ಹಾಡು

ಮಕ್ಕಳ ಮಿತ್ರ, ಮಹಿಳಾ ಮಿತ್ರ
ಅದುವೇ ನಮ್ಮಯ ಪಾತ್ರ
ಮಕ್ಕಳ ರಕ್ಷಣೆ, ಮಹಿಳೆಯ ರಕ್ಷಣೆ
ಅದುವೇ ನಮ್ಮಯ ಹೊಣೆ ----॥ಮಕ್ಕಳ ಮಿತ್ರ॥
ಬಡವರೇ ಆಗಲಿ ಧನಿಕರೇ ಆಗಲಿ
ನ್ಯಾಯ ಎಲ್ಲರಿಗೊಂದೇ – – –
ಹಿರಿಯರೇ ಆಗಲಿ ಕಿರಿಯರೆ ಆಗಲಿ
ನೀತಿ ಎಲ್ಲರಿಗೊಂದೇ --- ॥ಮಕ್ಕಳ ಮಿತ್ರ॥
ಮಗುವಿಗೆ ಬೇಕು, ಮಹಿಳೆಗೆ ಬೇಕು
ನಮ್ಮಯ, ನಿಮ್ಮಯ ಬೆಂಬಲ
ನ್ಯಾಯಕ್ಕಾಗಿ ಹೋರಾಟ
ಅದುವೇ ನಮ್ಮಯ ಹಂಬಲ ---- ॥ಮಕ್ಕಳ ಮಿತ್ರ॥
ನಮ್ಮಲಿ ಮಾಹಿತಿ ಇದ್ದರೆ
ನಮಗೆ ನಾವೇ ಯಜಮಾನ
ನಾವು ಮಾಡುವ ಶ್ರಮಕ್ಕಿದೆ
ಬಲು ದೊಡ್ಡ ಅಭಿಮಾನ ---- ॥ಮಕ್ಕಳ ಮಿತ್ರ॥

**ತಿಲಕ್ ರಾಜ್, ಬಳ್ಕೂರು**

## ಅಗತ್ಯ ಸಂಪರ್ಕ ಸಂಖ್ಯೆಗಳು

| ಸಂಪರ್ಕಿಸಬೇಕಾದವರ ವಿವರ | ಸಂಪರ್ಕ ಸಂಖ್ಯೆ |
|---|---|

***24 X 7 ಸೇವೆಯ ಸಿ.ಡಬ್ಲ್ಯೂ.ಸಿ – ನಮ್ಮ ಭೂಮಿ ಸಂಸ್ಥೆಯ ದೂರವಾಣಿ ಸಂಖ್ಯೆ – 81052 47409***

| | |
|---|---|
| ಉಚಿತ ಕರೆತ ಪೋಲಿಸ್ ಇಲಾಖೆಯ ದೂರವಾಣಿ ಸಂಖ್ಯೆ | 100 |
| ಅಧ್ಯಕ್ಷರು, ತಾಲೂಕು ಪಂಚಾಯತ್ ಕುಂದಾಪುರ | 08254 - 230357 |
| ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆ, ನಮ್ಮ ಭೂಮಿ, ಕನ್ಯಾನ ಅಂಚೆ, ಹಟ್ಟಿಯಂಗಡಿ ಕ್ರಾಸ್ ಹತ್ತಿರ, ಕುಂದಾಪುರ ತಾಲೂಕು | 08254 – 264206 |
| ಪೋಲಿಸ್ ಠಾಣೆ ಕುಂದಾಪುರ | 08254-230338 |
| ಮಹಿಳಾ ಪೋಲಿಸ್ ಠಾಣೆ ಕುಂದಾಪುರ | 08254-231338 |
| ಸಂಚಾರಿ ಪೋಲಿಸ್ ಠಾಣೆ ಕುಂದಾಪುರ | 08254-233800 |
| ಪೋಲಿಸ್ ಠಾಣೆ ಗಂಗೊಳ್ಳಿ | 08254-265333 |
| ಪೋಲಿಸ್ ಠಾಣೆ ಶಂಕರನಾರಾಯಣ | 08259-280299 |
| ಪೋಲಿಸ್ ಠಾಣೆ ಅಮಾಸೆಬೈಲು | 08259-286499 |
| ಪೋಲಿಸ್ ಠಾಣೆ ಬೈಂದೂರು | 08254-251033 |
| ಪೋಲಿಸ್ ಠಾಣೆ ಕೊಲ್ಲೂರು | 08254-258233 |
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕುಂದಾಪುರ | 08254-230807 |
| ಶ್ರೀ ಬಿ.ಕೆ. ನಾರಾಯಣ, ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ ಉಡುಪಿ | 9845909904 |
| ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಉಡುಪಿ | 0820-2574964 |
| ಜಿಲ್ಲಾಧಿಕಾರಿಗಳ ಕಛೇರಿ, ಉಡುಪಿ | 0820-2574525 |

### ಸಂಪನ್ಮೂಲ ತಂಡದ ವಿವರ

| ಸಂಪರ್ಕಿಸ ಬೇಕಾದವರ ವಿವರ | ಸಂಪರ್ಕ ಸಂಖ್ಯೆ |
|---|---|
| ಶ್ರೀ ಭಾಸ್ಕರ ಬಿಲ್ಲವ, ಅಧ್ಯಕ್ಷರು ತಾಲೂಕು ಪಂಚಾಯತ್ ಕುಂದಾಪುರ | 7829183403 |
| ಶ್ರೀ ರಮೇಶ ಗಾಣಿಗ ಕೊಲ್ಲೂರು, ತಾಲೂಕು ಪಂಚಾಯತ್ ಸದಸ್ಯರು ಕುಂದಾಪುರ | 9448790489 |
| ಶ್ರೀ ಹೆಚ್. ಮಂಜು ಬಿಲ್ಲವ, ತಾಲೂಕು ಪಂಚಾಯತ್ ಸದಸ್ಯರು ಕುಂದಾಪುರ | 9481749972 |
| ಶ್ರೀ ಕೆ. ಪ್ರದೀಪ ಕುಮಾರ್ ಶೆಟ್ಟಿ, ತಾಲೂಕು ಪಂಚಾಯತ್ ಸದಸ್ಯರು ಕುಂದಾಪುರ | 9448109456 |
| ಶ್ರೀ ಹೆಚ್. ಮಂಜಯ್ಯ ಶೆಟ್ಟಿ, ತಾಲೂಕು ಪಂಚಾಯತ್ ಸದಸ್ಯರು ಕುಂದಾಪುರ | 9900738405 |
| ಶ್ರೀ ಎಸ್. ಜನಾರ್ಧನ ಮರವಂತೆ | 9448501879 |
| ಶ್ಯಾಮಲಾ ಭಂಡಾರಿ, ರಾಜ್ಯ ಮಹಿಳಾ ಆಯೋಗದ ಸದಸ್ಯರು, ಕುಂದಾಪುರ | 9845469567 |
| ಶ್ರೀ ಟಿ. ಬಿ. ಶೆಟ್ಟಿ, ನ್ಯಾಯವಾದಿಗಳು, ಕುಂದಾಪುರ | 9448625638 |
| ಶ್ರೀ ರಾಘವೇಂದ್ರ ಚರಣ ನಾವುಡ, ನ್ಯಾಯವಾದಿಗಳು, ಕುಂದಾಪುರ | 9845224539 |
| ಶ್ರೀ ಸುಬ್ರಹ್ಮಣ್ಯ ಪಡುಕೋಣೆ, ಪತ್ರಕರ್ತರು, ಕುಂದಾಪುರ | 9448502012 |
| ಕಾರ್ಯ ನಿರ್ವಹಣಾಧಿಕಾರಿಗಳು, ತಾಲೂಕು ಪಂಚಾಯತ್ ಕುಂದಾಪುರ | 08254 - 230357 |
| ಉಪ ಪೋಲಿಸ್ ಅಧೀಕ್ಷಕರು, ಕುಂದಾಪುರ ಪೋಲಿಸ್ ಠಾಣೆ | 08254 - 230880 |
| ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕುಂದಾಪುರ | 08254 - 230618 |
| ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೈಂದೂರು | 08254 - 250066 |

ಪಂಚಾಯತ್ ತೂಫಾನ್

ಪ್ರಕಟಣೆಯ ಮತ್ತು ಪ್ರಕ್ರಿಯೆಯ ಸಹಕಾರ:

**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**

ಪ್ರಾದೇಶಿಕ ಕೇಂದ್ರ : ನಮ್ಮ ಭೂಮಿ, ಕನ್ಯಾನ ಅಂಚೆ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ - 576 230
ದೂರವಾಣಿ: 08254-264206, 264214

ಕೇಂದ್ರ ಕಛೇರಿ : 303/2, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ವಿಮಾನಪುರ ಅಂಚೆ ಬೆಂಗಳೂರು-560 017
ದೂರವಾಣಿ: 080-25234270, 25234272, 25234611